# ಹಂಪಿ ಟೈಮ್ಸ್

HAMPI TIMES

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

ಕನ್ನಡ ದಿನಪತ್ರಿಕೆ
KANNADA DAILY




ಇಂದು ಹಾಗೂ ಹಿಂದಿನ ಹಂಪಿ ಟೈಮ್ಸ್ ಕಲರ್‌ಫುಲ್ ಇ-ದಿನಪತ್ರಿಕೆ ಓದಲು QR ಕೋಡ್ ಸ್ಕ್ಯಾನ್ ಮಾಡಿ ಓದಿರಿ.
ಹಂಪಿ ಟೈಮ್ಸ್ ಇ-ಪೇಪರ್ ಓದುಗರ ಸಂಖ್ಯೆ
55,000
Plus readers
Place Your Ads
Reach New Audience
9448633038
hampitimes@gmail.com Valmiki Circle, Hosapete-583201



ಸಂಪುಟ:01 • ಸಂಚಿಕೆ:302 • ನೋಂದಣಿ ನಂ.:KARKAN27911 • ವಿಜಯನಗರ • 01.05.2024 • ಬುಧವಾರ • ಪುಟ:04 • ಬೆಲೆ:2
Volume:01 • Issue:302 • Reg.No:KARKAN27911 • VIJAYANAGARA • 01.05.2024 • Wednesday • Page:04 • Rs:2


ಮೈಮೇಲೆ ಹರಿದ ಬಟ್ಟೆ ಇದ್ದರೂ ಚಿಂತೆಯಿಲ್ಲ. ಕೈಯಲ್ಲೊಂದು ಕನ್ನಡ ಪತ್ರಿಕೆ ಇರಲಿ. ಡಿ..ವಿ.ಜಿ.

# ಶೈಕ್ಷಣಿಕ ಪ್ರಗತಿಗೆ ವಿಜಯನಗರ ಕಾಲೇಜ್ ಬದ್ಧ

## ಆಡಳಿತ ಮಂಡಳಿ ಅಧ್ಯಕ್ಷ ಮೆಟ್ರಿ ಮಲ್ಲಿಕಾರ್ಜುನ ಹೇಳಿಕೆ | ಕಾಲೇಜ್ ಪ್ರಗತಿಗೆ ಉಪನ್ಯಾಸಕರ ಸಹಕಾರ ಸದಾ ಇರಲಿ

## ಕರೆದು ಕೆಲಸಕೊಟ್ಟ ವೀ.ವಿ.ಸಂಸ್ಥೆಗೆ ಎಂದಿಗೂ ಚಿರಋಣಿ ಎಂದ ನಿವೃತ್ತ ಉಪನ್ಯಾಸಕಿ ಡಾ.ಕೆ.ಪ್ರೇಮಲತಾ

**ಹಂಪಿ ಟೈಮ್ಸ್ ಹೊಸಪೇಟೆ**

ಶಿಕ್ಷಣ ಸಂಸ್ಥೆಗಳ ಅಭಿವೃದ್ಧಿ ಮತ್ತು ವಿದ್ಯಾರ್ಥಿಗಳ ಶೈಕ್ಷಣಿಕ ಪ್ರಗತಿಗೆ ಉಪನ್ಯಾಸಕರ ಕೊಡುಗೆ ಅಪಾರ ಎಂದು ವಿಜಯನಗರ ಮಹಾವಿದ್ಯಾಲಯದ ಆಡಳಿತ ಮಂಡಳಿ ಅಧ್ಯಕ್ಷ ಎನ್.ಮೆಟ್ರಿ ಮಲ್ಲಿಕಾರ್ಜುನ ಹೇಳಿದರು.

ನಗರದ ವಿಜಯನಗರ ಮಹಾವಿದ್ಯಾಲಯದಲ್ಲಿ ಮಂಗಳವಾರ ಜೀವಶಾಸ್ತ್ರ ವಿಭಾಗದ ಉಪನ್ಯಾಸಕಿ ಕೆ.ಪ್ರೇಮಲತಾ ಅವರ ವಯೋನಿವೃತ್ತಿ ಬೀಳ್ಕೊಡುಗೆ ನಿಮಿತ್ತ ಅವರನ್ನು ಸನ್ಮಾನಿಸಿ ಮಾತನಾಡಿದರು. ಕಾಲೇಜುಗಳ ಪ್ರಗತಿಗೆ ಉಪನ್ಯಾಸಕರ ಸಹಕಾರ ಅಗತ್ಯ. ಗ್ರಾಮೀಣ ಮಕ್ಕಳ ಶೈಕ್ಷಣಿಕ ಕನಸು ನನಸಾಗಿಸಲೆಂದು ಸ್ಥಾಪನೆಗೊಂಡ ವಿಜಯನಗರ ಮಹಾವಿದ್ಯಾಲಯವು ಲಕ್ಷಾಂತರ ವಿದ್ಯಾರ್ಥಿಗಳಿಗೆ ಶಿಕ್ಷಣ ನೀಡಿ, ತನ್ನದೇ ಆದ ವಿಶೇಷ ಇತಿಹಾಸವನ್ನು ಹೊಂದಿದೆ. ಸ್ಪರ್ಧಾತ್ಮಕ ಯುಗದಲ್ಲಿ ವಿದ್ಯಾರ್ಥಿಗಳ ಪ್ರಗತಿಗೆ ಉಪನ್ಯಾಸಕರು ಶ್ರಮಿಸುವುದರ ಜೊತೆಗೆ ಕಾಲೇಜ್‌ನ್ನು ಮತ್ತಷ್ಟು ಉನ್ನತಿಕರಣಗೊಳಿಸಲು ಸಹಕಾರ ನೀಡಬೇಕು ಎಂದು ಕೋರಿದ ಅವರು, ನಿವೃತ್ತಿಗೊಂಡ ಕೆ.ಪ್ರೇಮಲತಾ ಅವರ ನಿವೃತ್ತಿ ಬದುಕು ನೆಮ್ಮದಿಯಿಂದ ತುಂಬಿರಲಿ ಎಂದರು.

ನಿವೃತ್ತ ಉಪನ್ಯಾಸಕಿ ಡಾ.ಕೆ.ಪ್ರೇಮಲತಾ ಸನ್ಮಾನ ಸ್ವೀಕರಿಸಿ ಮಾತನಾಡಿ, ನಿವೃತ್ತಿ ಒಂದೆಡೆ ಖುಷಿ ನೀಡಿದರೆ ಮತ್ತೊಂದೆಡೆ ದುಃಖವನ್ನು ನೀಡುತ್ತದೆ. ಮೂವತ್ತೂರು ವರ್ಷಗಳ ಕಾಲ ವೀ.ವಿ.ಸಂಘದ ವಿವಿಧ ಕಾಲೇಜುಗಳಲ್ಲಿ ಉಪನ್ಯಾಸ ನೀಡಿ, ಕಾಲೇಜಿನೊಂದಿಗೆ ಉತ್ತಮ ಬಾಂಧವ್ಯ ಹೊಂದಿದ್ದೇನೆ. ಗುಣಮಟ್ಟದ ಶಿಕ್ಷಣ ನೀಡುವುದರ ಜೊತೆ



ಪರಿಶ್ರಮಪಟ್ಟ ವಿದ್ಯಾರ್ಥಿಗಳಿಗೆ ಒಳಿತಾಗಬೇಕೆಂಬ ಸದುದ್ದೇಶದಿಂದಾಗಿ ಅಂಕಗಳನ್ನು ನ್ಯಾಯಯುತವಾಗಿ ಕೊಟ್ಟಿದ್ದೇನೆ. ಈವರೆಗೂ ನನ್ನ ಕೆಲಸವನ್ನು ಸೇವೆ ಎನ್ನುವುದಕ್ಕಿಂತ ಕರ್ತವ್ಯ ಎಂದು ಭಾವಿಸಿ ನನ್ನ ಜವಾಬ್ದಾರಿಯನ್ನು ಗುರು ಹಿರಿಯರ ಮಾರ್ಗದರ್ಶನ, ಸಹುದ್ಯೋಗಿಗಳ ಸಹಕಾರದಿಂದ ನಿಭಾಯಿಸಿದ್ದೇನೆ. ಇದೇ ಕಾಲೇಜಿನಲ್ಲಿ ಓದು ಪೂರ್ಣಗೊಳಿಸಿದ್ದೆ. ನನ್ನ ಅರ್ಹತೆಯನ್ನು ಪರಿಗಣಿಸಿ ಕೆಲಸ ಮಾಡಲು ಕರೆದು ಅವಕಾಶ ಕೊಟ್ಟ ವೀ.ವಿ.ಸಂಘವನ್ನು ಎಂದಿಗೂ ಮರೆಯಲಾರೆ. ಹಾಗೇ ಮಹಿಳೆಯರನ್ನು ಓದಿಸಲು ಹಿಂಜರಿಯುತ್ತಿದ್ದ ಆ ದಿನಗಳಲ್ಲಿ ನನ್ನ ತಂದೆ ತಾಯಿ ನನಗೆ ಓದಲು ಪ್ರೇರಪಣೆ ನೀಡಿ, ಪ್ರೋತ್ಸಾಹಿಸಿದ್ದರ ಪರಿಣಾಮ, ವಿದ್ಯಾರ್ಥಿಗಳನ್ನು ಉಪನ್ಯಾಸಕರನ್ನಾಗಿಸಿದ ಖುಷಿ ನನಗಿದೆ. ಅನೇಕರು ವಿದ್ಯಾರ್ಥಿಗಳು ನನ್ನ ಜೊತೆಯಲ್ಲೇ ಉಪನ್ಯಾಸಕರಾಗಿ ಬೋಧಿಸುತ್ತಿರುವುದು ನನಗೆ ಹೆಮ್ಮೆ ತಂದಿದೆ ಎಂದರು.

ವಿಜಯನಗರ ಮಹಾವಿದ್ಯಾಲಯದ ಪ್ರಾಂಶುಪಾಲ ವಿಜಯ ಎಸ್. ಗುಳಲಕಾಯಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಇದೇ ಸಂದರ್ಭದಲ್ಲಿ ನಿವೃತ್ತಗೊಂಡ ಉಪನ್ಯಾಸಕಿ ಕುರಿತು ಹಿರಿಯ ಉಪನ್ಯಾಸಕ ಡಾ.ಮೃತ್ಯುಂಜಯ ರುಮಾಲೆ, ನಿವೃತ್ತ ಪ್ರಾಂಶುಪಾಲ ಪ್ರಭಯ್ಯ ವಿ.ಎಸ್., ಉಪನ್ಯಾಸಕ ಪ್ರಭುಗೌಡ ಹಾಗೂ ಇತರರು ಅಭಿಪ್ರಾಯಗಳನ್ನು ವ್ಯಕ್ತಪಡಿಸಿದರು. ವಿಜಯನಗರ ಪಿಯು ಕಾಲೇಜ್ ಪ್ರಾಂಶುಪಾಲ ಎಚ್.ಎಂ.ನಿರಂಜನ, ಹರಪನಹಳ್ಳಿ ಕಾಲೇಜ್ ಪ್ರಾಂಶುಪಾಲ ಸುಭಾಶ ಸೇರಿದಂತೆ ಉಪನ್ಯಾಸಕರು ಸನ್ಮಾನಿಸಿ ನಿವೃತ್ತಿ ಜೀವನಕ್ಕೆ ಶುಭಕೋರಿದರು. ಇದೇ ಸಂದರ್ಭದಲ್ಲಿ ಛೇಂಬರ್ ಆಫ್ ಕಾಮರ್ಸ್‌ನ ಅಧ್ಯಕ್ಷ ಅಶ್ವಿನ್ ಕೊತ್ತಂಬ್ರಿ ಸೇರಿದಂತೆ ಇತರರು ಉಪಸ್ಥಿತರಿದ್ದರು.

> ವಿಜಯನಗರ ಮಹಾವಿದ್ಯಾಲಯದ ಅಭಿವೃದ್ಧಿಗೆ ಅನೇಕರು ಶ್ರಮಿಸಿದ್ದಾರೆ. ಎಲ್ಲರ ಸಹಕಾರದೊಂದಿಗೆ ಮತ್ತಷ್ಟು ಕಾಲೇಜು ಉನ್ನತಿಗೆ ಶ್ರಮಿಸುವೆ. ನಿವೃತ್ತಿಯಾದ ಉಪನ್ಯಾಸಕ ಭವಿಷ್ಯದ ಜೀವನದ ಆರೋಗ್ಯಕರವಾಗಿರಲಿ.
> – ಎನ್.ಮೆಟ್ರಿ ಮಲ್ಲಿಕಾರ್ಜುನ, ಅಧ್ಯಕ್ಷರು, ವಿಜಯನಗರ ಕಾಲೇಜ್. ಹೊಸಪೇಟೆ.

> 33 ವರ್ಷ ಮಾಡಿದ ಕಾಯಕವನ್ನು ಸೇವೆ ಎನ್ನಲಾರೆ, ಮಾಡಿದ ಕೆಲಸಕ್ಕೆ ಪ್ರತಿಫಲ ಪಡೆದರೆ ಅದು ಸೇವೆ ಎನಿಸಿಕೊಳ್ಳುವುದಿಲ್ಲ. ಕರ್ತವ್ಯವೆಂದು ಮಾಡಿದ್ದೇನೆ.
> – ಡಾ. ಕೆ.ಪ್ರೇಮಲತಾ, ನಿವೃತ್ತ ಉಪನ್ಯಾಸಕಿ

> 90ರ ದಶಕದಲ್ಲಿ ನೇಮಕಗೊಂಡ ಬಹುತೇಕರು ನಿವೃತ್ತಿಗೊಂಡಿದ್ದು, ಉಳಿದ ಕೆಲವರು ಮೇ ತಿಂಗಳ ಅಂತ್ಯದಲ್ಲಿ ನಿವೃತ್ತಿಯಾಗಲಿದ್ದಾರೆ. ನೂತನ ಅಧ್ಯಕ್ಷರು ಖಾಲಿ ಹುದ್ದೆಗಳ ಖಾಯಂ ಭರ್ತಿಗೆ ಮುತುವರ್ಜಿವಹಿಸಿ, ಅರೆಕಾಲಿಕವಾಗಿ ಕೆಲಸ ಮಾಡುತ್ತಿರುವವರಿಗೆ ಮೊದಲ ಆಧ್ಯತೆ ನೀಡಿ, ಪ್ರೋತ್ಸಾಹಿಸಿ, ಕಾಲೇಜು ಕೀರ್ತಿ ಹೆಚ್ಚಿಸಿ.
> – ಪ್ರಭುಯ್ಯ.ವಿ.ಎಸ್., ನಿವೃತ್ತ ಪ್ರಾಂಶುಪಾಲರು.


3 BHK independent Duplex House For Sale
Duplex House with Built Area 2300 sq.ft. in an extent of 1500 sq.ft. for Sale at Rajeev Nagar, 2nd Cross, Hospet. (adjacent KSSIDC Industrial Estate)

94409 86570

MASSEY FERGUSON TAFE
ವಿಜಯಶ್ರೀ ಮೋಟಾರ್ಸ್ (ಟ್ರ್ಯಾಕ್ಟರ್ ವಿಭಾಗ)
RRR GROUP

99801 27607
73533 06719

ವಿವೇಕಶ್ರೇಯಾಲಾಪ
ಸಂಗೀತ ತರಬೇತಿ
VIVĒKASRĒYĀLĀPA
VEENA INSTRUMENTAL VOCAL - KARNATIC AND FILM MUSIC Classes
contact for more information
91082 26938
90368 65666
Near Honda Showroom, Hosapete-583201

S.M.TRADERS & SERVICES
ATLAS COPCO
COMPRESSORS, HOSEPIPE, DRILL RODS,SPARE PARTS Etc.
Contact for Details
96866 63125
96866 63132
96864 13132
Hampi Road, Hosapete-583201


# ತಾಪಮಾನ ತಗ್ಗಲು ಗಿಡಮರ ಬೆಳೆಸಿ

## ಡಾ.ಬಂಡ್ರಿ ವಿಶ್ವನಾಥ ಹೇಳಿಕೆ | ಚಿಣ್ಣರ ಬಣ್ಣ ಬೇಸಿಗೆ ಶಿಬಿರ




**ಹಂಪಿ ಟೈಮ್ಸ್ ಹಗರಿಬೊಮ್ಮನಹಳ್ಳಿ**

ಇಂದು ಗಿಡಮರಗಳನ್ನು ನಾಶಮಾಡುತ್ತಿದ್ದಾರೆ ವಿನಃ ಅವುಗಳನ್ನು ಬೆಳಸುವ ಮತ್ತು ಸಂರಕ್ಷಿಸುವ ಹೊಣೆಯಿಂದ ಮನುಷ್ಯ ಜಾರಿಕೊಳ್ಳುತ್ತಿದ್ದಾನೆ. ಮನೆಗೆರಡು ಮರಗಳನ್ನು ಬೆಳೆಸಲು ಕಡ್ಡಾಯ ಮಾಡಿದರೆ ತಾಪಮಾನ ಕಡಿಮೆಯಾಗುತ್ತದೆ ಎಂದು ಡಾ.ಬಂಡ್ರಿ ವಿಶ್ವನಾಥ ಅಭಿಪ್ರಾಯಪಟ್ಟರು.

ಪಟ್ಟಣದ ಶ್ರೀರೇಣುಕಾ ವಿದ್ಯಾಸಂಸ್ಥೆಯ ಆವರಣದಲ್ಲಿ ಹಮ್ಮಿಕೊಳ್ಳಲಾಗಿದ್ದ, ಕರ್ಮಯೋಗ ಟ್ರಸ್ಟ್‌ನವರು ಮಂಗಳವಾರ ಹಮ್ಮಿಕೊಂಡಿದ್ದ ಚಿಣ್ಣರ ಬಣ್ಣ ಬೇಸಿಗೆ ಶಿಬಿರದ ಸಮಾರೋಪ ಸಮಾರಂಭದಲ್ಲಿ ಮಾತನಾಡಿದರು. ಚಿಣ್ಣರು ಕಲಿಯುವ ಹಂತದಲ್ಲಿದ್ದಾರೆ. ಅವರಿಗೆ ಮುಂದೆ ಕಾಗದಗಳ ಮರಗಿಡಗಳನ್ನು ತೋರಿಸುವಂತ ಪರಿಸ್ಥಿತಿ ತಂದುಕೊಳ್ಳಬಾರದು. ಸರ್ಕಾರಿ ಸೌಲಭ್ಯಗಳನ್ನು ಕೇಳಲು ಬಂದವರಿಗೆ ಕಡ್ಡಾಯವಾಗಿ ವರ್ಷಕ್ಕೆರಡು ಗಿಡಗಳನ್ನು ನೆಟ್ಟು ಬೆಳಸಬೇಕು ಎಂದು ಕಡ್ಡಾಯಗೊಳಿಸಿ ಎಂದು ಅಧಿಕಾರಿಗಳು ತಾಖೀತು ಮಾಡುವ ದಿನಗಳು ದೂರಿಲ್ಲ. ಅದಕ್ಕೂ ಮೊದಲೇ ಜನರು ಎಚ್ಚೆತ್ತುಕೊಂಡು ಗಿಡನೆಟ್ಟರೆ ಆರೋಗ್ಯ ಸಮಾಜಕ್ಕೊಂದು ಉತ್ತಮ ಕೊಡುಗೆಯಾಗಲಿದೆ ಎಂದರು.

ನಂದಿಪುರದ ಮಹೇಶ್ವರ ಸ್ವಾಮೀಜಿ ಮಾತನಾಡಿ, ಮಕ್ಕಳಲ್ಲಿ ಅಬ್ಬುತವಾದ ಕಲೆಗಳಿರುತ್ತಾವೆ. ಅವುಗಳನ್ನು ಗುರುತ್ತಿಸುವಂತ ಕಾರ್ಯಕ್ರಮಗಳು ಶಿಬಿರಗಳಲ್ಲಿ ಮೇಳೈಸಲಿ ಎಂದರು. ಹಾಲಸ್ವಾಮಿ ಮಠದ ಹಾಲಸಿದ್ದೇಶ್ವರ ಸ್ವಾಮೀಜಿ ಮಾತನಾಡಿ, ಅಂದು ಚಿಕ್ಕರಿರುವಾಗ ಅಜ್ಜ ಅಜ್ಜಿಯ ಊರಿಗಳಿಗೆ ತೆರಳಿ ಅಲ್ಲಿಯೂ ನಾನಾ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುತ್ತಿದ್ದವರು ಇಂದು, ತಮ್ಮ ಮಕ್ಕಳನ್ನು ಶಿಬಿರಗಳಿಗೆ ಕಳಿಸುವಂತ ಕಾಲ ಬಂದಿದೆ. ಇದಕ್ಕೆ ಕಾರಣ ಆಧುನಿಕತೆಯಲ್ಲಿ ಬಾಂಧವ್ಯಗಳಿಗೆ ಕೊರತೆ ಕಾಣುತ್ತಿದೆ ಎಂದರು.

ತಾಲೂಕಿನ ಪ್ರಥಮ ನ್ಯಾಯಾಧೀಶರಾಗಿ ಆಯ್ಕೆಯಾದ ಎನ್.ವಿಜಯಕುಮಾರ್ ಮಾತನಾಡಿದರು. ಕನ್ನಿಹಳ್ಳಿ ಚಂದ್ರಶೇಖರ್ ಅಧ್ಯಕ್ಷತೆವಹಿಸಿದ್ದರು.

ಕರ್ಮಯೋಗ ಟ್ರಸ್ಟ್‌ನ ಕರಾಟೆ ತರಬೇತಿಯಲ್ಲಿ ಬ್ಲಾಕ್ ಬೆಲ್ಟ್‌ಗಳನ್ನು ಪಡೆದ ವಿದ್ಯಾರ್ಥಿಗಳಿಗೆ ಬೆಲ್ಟ್, ಪ್ರಮಾಣಪತ್ರಗಳನ್ನು ವಿತರಿಸಲಾಯಿತು. ವೈದ್ಯರಾಗಿ ವ್ಯಾಸಂಗ ಮುಗಿಸಿದ ಡಾ.ಜೆ.ಎಂ.ಆರ್.ಅಮೃತಾ ಹಾಗೂ ಡಾ.ಪ್ರಜ್ವಲ್ ಅಂಗಡಿಯವರಿಗೂ ಮತ್ತು ನ್ಯಾಯಾಧೀಶರಾಗಿ ಆಯ್ಕೆಯಾದ ಎನ್.ವಿಜಯಕುಮಾರ್ ಸನ್ಮಾನಿಸಿ ಗೌರವಿಸಲಾಯಿತು. ಟ್ರಸ್ಟ್‌ನ ಮುಖ್ಯಸ್ಥ ಸುಭಾಷ್ ಮುತ್ತೂರು ಪ್ರಾಸ್ತಾವಿಕವಾಗಿ ಮಾತನಾಡಿದರು. ಕೆ.ಎಂ. ಶಿವಶಂಕರ್ ನಿರ್ವಹಿಸಿದರು.

# ಮತ ಮಾರಿಕೊಂಡರೆ ಮಗಳನ್ನು ಮಾರಿಕೊಂಡಂತೆ

## ಜಿಲ್ಲಾಡಳಿತ ಸಾರಿಗೆ ವ್ಯವಸ್ಥೆ ಕಲ್ಪಿಸಲು ಆಗ್ರಹ




**ಹಂಪಿ ಟೈಮ್ಸ್ ಹೊಸಪೇಟೆ**

ವಿಜಯನಗರ ನಾಗರೀಕಾ ವೇದಿಕೆ ಹಾಗೂ ಆದಿತ್ಯ ಹೃದಯಂ ಸಂಘಟನೆಗಳ ವತಿಯಿಂದ ಇಂದು ನಗರದ ಪುನಿತ್ ರಾಜ್‌ಕುಮಾರ್ ವೃತ್ತದಲ್ಲಿ ಭ್ರಷ್ಟಾಚಾರ ಮುಕ್ತ ಮತದಾನ ಜಾಗೃತಿಯ ಬಗ್ಗೆ ಕಾರ್ಯಕ್ರಮ ನಡೆಸಲಾಯಿತು.

ಸಂಘಟನೆಯ ಪದಾಧಿಕಾರಿಗಳು "ಮತಮಾರಿಕೊಂಡರೆ ಮನೆ ಮಗಳನ್ನು ಮಾರಿಕೊಂಡಂತೆ" (ಡಾ. ಅಂಬೇಡ್ಕರ್) "ಕಳಬೇಡ ಕೊಲಬೇಡ ಮತದಾನ ಮರಿಯಬೇಡ" "ಜಾಗೃತ ಮತದಾರ ರಾಷ್ಟ್ರದ ನೇತಾರ" ಎಂಬ ಘೋಷಣೆಗಳನ್ನು ಕೂಗಿದರು.

ವಿಜನಯಗರ ನಾಗರೀಕ ವೇದಿಕೆಯ ಅಧ್ಯಕ್ಷ ವೈ.ಯಮುನೇಶ್ ಮಾತನಾಡಿ, ಮೇ–7 ರಂದು ನಡೆಯಲಿರುವ ಬಳ್ಳಾರಿ ಲೋಕಸಭಾ ಕ್ಷೇತ್ರದಲ್ಲಿ ದೊಡ್ಡ ಪ್ರಮಾಣದಲ್ಲಿ ಮತದಾನ ಮಾಡಬೇಕಿದೆ. ಪ್ರಜಾಪ್ರಭುತ್ವದಲ್ಲಿ ಮತದಾರರು ಹಕ್ಕು ಮತ್ತು ಅಧಿಕಾರವನ್ನು ಚಲಾಯಿಸಿ ದೇಶದ ಭವಿಷ್ಯವನ್ನು ನಿರ್ಧರಿಸುವ ಅವಕಾಶ ದೊರೆತಿದೆ. ಮತದಾನ ದಿನವೆಂದರೆ ಅದು ರಜೆಯ ದಿನವಲ್ಲ ಜವಾಬ್ದಾರಿಯ ದಿನ, ಪ್ರಜಾಪ್ರಭುತ್ವದ ಬೇರುಗಳು ಗಟ್ಟಿಯಾಗಬೇಕಾದರೆ ಮುಕ್ತ ಹಾಗೂ ನ್ಯಾಯ ಸಮ್ಮತ ಚುನಾವಣೆ ನಡೆಯುವ ನಿಟ್ಟಿನಲ್ಲಿ ಜಾತಿ, ಧರ್ಮ ಹಣದ ಅಮಿಷಕ್ಕೆ ಒಳಗಾಗದೇ ಮತ ಚಲಾಯಿಸಬೇಕು. ಮತದಾರರು ಸ್ವಯಂ ವಿವೇಚನೆಯಿಂದ ಮತ ಚಲಾಯಿಸಿದಾಗ ಮಾತ್ರ ಉತ್ತಮ ಸರ್ಕಾರ ರಚನೆಯಾಗುತ್ತದೆ. ಹಣ ಹಂಚಿಕೆ ಮಾಡಿ ಮತದಾರರಿಗೆ ಬಗೆ ಬಗೆಯ ಅಮೀಷಗಳನ್ನು ಒಡ್ಡಿ ಗೆದ್ದುಬಂದ ಅಭ್ಯರ್ಥಿಯು ನಂತರ ಸುಮ್ಮನಾಗದೇ ತಾನು ಖರ್ಚು ಮಾಡಿದ ಹಣದ 10 ಪಟ್ಟು ಗಳಿಸಲು ಭ್ರಷ್ಟಾಚಾರವೆಸಗುತ್ತಾನೆ. ಮತದಾರರು ಯಾವುದೇ ಆಮೀಷಕ್ಕೆ ಒಳಗಾಗದೇ ಮತಚಲಾಯಿಸುವ ಅಗತ್ಯವಿದೆ. ನಮ್ಮ ರಾಜ್ಯದಲ್ಲಿ ನಡೆದ ಮೊದಲ ಹಂತದ ಚುನಾವಣೆಯಲ್ಲಿ ಶತಾಯುಷಿಗಳು, ಆಸ್ಪತ್ರೆಯಲ್ಲಿದ್ದ ರೋಗಿಗಳು, ಆಗಷ್ಟೇ ಮದುವೆಯಾದ ನವದಂಪತಿಗಳು ಅಲ್ಲದೇ ವಿದೇಶದಿಂದ ಬಂದು ತಮ್ಮ ಕ್ಷೇತ್ರಗಳಲ್ಲಿ ಮತ ಚಲಾಯಿಸಿದ್ದಾರೆ. ಅದೇರೀತಿ ಬಳ್ಳಾರಿ ಲೋಕಸಭಾ ಕ್ಷೇತ್ರದಲ್ಲಿ ಪ್ರತಿ 5 ವರ್ಷಕ್ಕೊಮ್ಮೆ ನಡೆಯುವ ಚುನಾವಣೆಯಲ್ಲಿ ಮತದಾರರು ಮನೆಯಲ್ಲಿ ಕೂಡದೇ ಬಿಸಿಲಿಗೆ ಹೆದರದೆ ಮತಗಟ್ಟೆಗೆ ಬಂದು ಮತಚಲಾಯಿಸಬೇಕಿದೆ. ಇದೇ ಸಂದರ್ಭದಲ್ಲಿ ಬಳ್ಳಾರಿ ಲೋಕಸಭಾ ಕ್ಷೇತ್ರದಲ್ಲಿ ಬಿಸಿಲಿನ ಪ್ರಖರತೆ ಹಾಗೂ ಬಿಸಿಗಾಳಿ ಹೆಚ್ಚಾಗಿರುವುದರಿಂದ ಹಿರಿಯ ನಾಗರಿಕರಿಗೆ, ಮಹಿಳೆಯರಿಗೆ ಮತಗಟ್ಟೆಗಳಿಗೆ ಹೋಗಿ ಬರಲು ಜಿಲ್ಲಾಡಳಿತವು ಸಾರಿಗೆ ವ್ಯವಸ್ಥೆ ಹಾಗೂ ಮತಗಟ್ಟೆಗಳಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಮಾಡಿದರೆ ಮತದಾನದ ಪ್ರಮಾಣ ಹೆಚ್ಚಾಗುತ್ತದೆ ಎಂದರು.

ಈ ಸಂದರ್ಭದಲ್ಲಿ ಆದಿತ್ಯ ಹೃದಯಂ ಸಂಘದ ಸಂಚಾಲಕರಾದ ಪ್ರೋ.ಜಿ.ಉಮಾಮಹೇಶ್ವರ್, ಪ್ರೊ. ಲಕ್ಷ್ಮಣ ಕರೀಭೀಮಣ್ಣನವರ್, ರಾಮನಮಲಿ, ಶಂಕ್ರಪ್ಪ, ಶ್ರೀಮತಿ ಜಾನಕಿ, ಲಕ್ಷ್ಮಣನಾಯ್ಕ, ಶ್ರೀನಿವಾಸಕಬ್ಬೇರ, ರಾಮಕೃಷ್ಣ, ಬೋಡಾರಾಮಪ್ಪ, ಗೋಪಿನಾಥ್, ವರುಣ್, ಐಲಿಸಿದ್ದಣ್ಣ, ಕೆ.ವಿರುಪಾಕ್ಷಪ್ಪ, ರವಿಕುಮಾರ್ ಮುಂತಾದವರು ಪಾಲ್ಗೊಂಡಿದ್ದರು.

# ಸಿಡಿಲಿಗೆ ಬಣವಿ ಭಸ್ಮ, ಆಕಳು, ಎಮ್ಮೆ- ಕರು ಬೆಂಕಿಗಾಹುತಿ

**ಹಂಪಿ ಟೈಮ್ಸ್ ಹಗರಿಬೊಮ್ಮನಹಳ್ಳಿ**

ತಾಲೂಕು ಗುಳೆದಾಳ್ ಗ್ರಾಮದ ಗೂಳಪ್ಪ ತಂದೆ ರೆಡ್ಡಿ ಬಸಪ್ಪ ರೈತನಿಗೆ ಸೇರಿದ ಬಣವಿಗೆ ಸಿಡಲು ಬಡಿದು ಎಮ್ಮೆ ಮತ್ತು ಕರು, ಒಂದು ಆಕಳು ಬೆಂಕಿಯಲ್ಲಿ ಸುಟ್ಟು ಕರಕಲಾಗಿವೆ. ಮರಿಯಮ್ಮನಹಳ್ಳಿ ಪೊಲೀಸ್ ಠಾಣೆ ಪೊಲೀಸರ ಪರಿಶೀಲನೆ ಮಾಡಿದರು. ಕಂದಾಯ ಇಲಾಖೆ ಹಾಜರಿದ್ದರು. ಅಗ್ನಿಶಾಮಕ ದಳ ಸಿಬ್ಬಂದಿ ಬೆಂಕಿ ನಂದಿಸಿದರು. ಐವತ್ತು ಸಾವಿರಕ್ಕೂ ಹೆಚ್ಚು ನಷ್ಟವಾಗಿದೆ ಎಂದು ರೈತ ಕಣ್ಣೀರಿಟ್ಟರು.

# ಮತದಾನ ಜಾಗೃತಿಗಾಗಿ ಬೈಕ್ ಏರಿದ ಡಿಸಿ, ಸಿಇಓ

## ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ ಹೇಳಿಕೆ | ಮತದಾನವು ಸಂವಿಧಾನ ಬದ್ಧ ಹಕ್ಕು | ಅವಕಾಶ ನಿಮ್ಮದು, ಆಯ್ಕೆಯೂ ನಿಮ್ಮದಾಗಿರಲಿ





**ಹಂಪಿ ಟೈಮ್ಸ್ ಹೊಸಪೇಟೆ**

ಲೋಕಸಭಾ ಸಾರ್ವತ್ರಿಕ ಚುನಾವಣೆ–2024ರ ಹಿನ್ನೆಲೆಯಲ್ಲಿ ಮತದಾನ ಜಾಗೃತಿ ಅಭಿಯಾನದ ಅಂಗವಾಗಿ ಭಾರತ ಚುನಾವಣಾ ಆಯೋಗ, ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಮತ್ತು ಜಿಲ್ಲಾ ಸ್ವೀಪ್ ಸಮಿತಿಯಿಂದ ಹೊಸಪೇಟೆ ನಗರದಲ್ಲಿ ಏಪ್ರೀಲ್ 30ರಂದು ಬೈಕ್ ರಾಲಿ ನಡೆಯಿತು.

ಬೈಕ್ ರ್‍ಯಾಲಿ ಹಿನ್ನೆಲೆಯಲ್ಲಿ ಬೇರೆ ಬೇರೆ ಇಲಾಖೆಯ ಅಧಿಕಾರಿಗಳು ಮತ್ತು ಸಿಬ್ಬಂದಿಯು ತಮ್ಮ ತಮ್ಮ ಬೈಕ್‌ಗಳು ಮತ್ತು ಸ್ಕೂಟಿಗಳೊಂದಿಗೆ ಸಂಜೆ ವೇಳೆಗೆ ಜಿಲ್ಲಾಡಳಿತ ಭವನದ ಆವರಣಕ್ಕೆ ಆಗಮಿಸಿದ್ದರು. ಮಹಿಳಾ ನೌಕರರು ಸಹ ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿದ್ದು ವಿಶೇಷವಾಗಿತ್ತು.

ಹೊಸಪೇಟೆಯ ಡ್ಯಾಮ್ ರಸ್ತೆಯಲ್ಲಿರುವ ಜಿಲ್ಲಾಡಳಿತ ಭವನದ ಆವರಣದಲ್ಲಿ ಬೈಕ್ ರ್‍ಯಾಲಿಗೆ ಜಿಲ್ಲಾಧಿಕಾರಿಗಳಾದ ಎಂ.ಎಸ್.ದಿವಾಕರ ಅವರು ಮತದಾನ ಜಾಗೃತಿಯ ಧ್ವಜ ತೋರಿಸುವ ಮೂಲಕ ಚಾಲನೆ ನೀಡಿದರು.

ಈ ವೇಳೆ ಮಾತನಾಡಿದ ಜಿಲ್ಲಾಧಿಕಾರಿಗಳು, ಮತದಾನವು ಪ್ರತಿಯೊಬ್ಬರಿಗೂ ಸಂವಿಧಾನ ಬದ್ಧವಾಗಿ ಬಂದಿರುವ ಹಕ್ಕಾಗಿದೆ. ಹೀಗಾಗಿ ಪ್ರತಿಯೊಬ್ಬರು ಮತದಾನದಲ್ಲಿ ಭಾಗಿಯಾಗಬೇಕು ಎಂದು ತಿಳಿಸಿದರು.

ಜಿಲ್ಲಾ ಸ್ವೀಪ್ ಸಮಿತಿಯ ಅಧ್ಯಕ್ಷ >4

## ಬೆಳಕಿನ ಹಾದಿ

# ಶಾಪ

■ ಚೇತನ ಭಾರ್ಗವ

ಒಬ್ಬ ವ್ಯಕ್ತಿ ಅಥವಾ ಸಮಾಜಕ್ಕೆ ಧಕ್ಕೆ ಬರುವಂತಹ ಅಥವಾ ಅವರ ಏಳಿಗೆ ಯಶಸ್ಸಿಗೆ ವಿಘ್ನಗಳಾಗಿ ಕುಂದುಂಟಾಗುವಂತಹ ಸನ್ನಿವೇಶಗಳಾದಾಗ ಯಾರದೋ ಶಾಪ ತಟ್ಟಿರಬಹುದು ಎಂದುಕೊಳ್ಳುತ್ತೇವೆ. ಶಾಪಕ್ಕಿರುವ ಮಹತ್ವ ಅದರ ಮಹಿಮೆ ಅಗಾಧವಾದುದು. ನಮ್ಮೆಲ್ಲಾ ಪುರಾಣ ಇತಿಹಾಸವೆಲ್ಲಾ ವರ ಹಾಗೂ ಶಾಪದ ಸರಮಾಲೆಯ ಮೇಲೆಯೇ ನಿಂತಿದೆ. ನಮಗೆ ತಿಳಿದಿರುವ ಪುರಾಣದ ಘಟನೆಗಳೆಲ್ಲಾ ಶಾಪದ ಪರಿಣಾಮಗಳೇ ಆಗಿದೆ. ಜಗದ ಮೂಲನಾದ ವಿಷ್ಣುವಿನ ದಶಾವತಾರಗಳು ,ಸನಕ ಸನಂದಾದಿಗಳು ವೈಕುಂಠದ ದ್ವಾರಪಾಲಕರಾದ ಜಯ ವಿಜಯರಿಗೆ ನೀಡಿದ ಶಾಪದಿಂದಾಗಿದ್ದು. ಜಗನ್ನಿಯಾಮಕನಾದ ಭಗವಂತನ ಇಚ್ಛೆಯಂತೆಯೇ ಎಲ್ಲವೂ ನಡೆವುದಾದರೂ ಕಾರಣವಿಲ್ಲದೆ ಯಾವ ಘಟನೆಗಳೂ ನಡೆಯದಂತೆ ಶಾಪ ವರಗಳು ಉಪಕರಣಗಂತೆ ಈ ಲೀಲಾ ಲೋಕದಲ್ಲಿ ಬಳಸಲ್ಪಡುತ್ತದೆ. ಅದರಲ್ಲೂ ಶಾಪದ ವಿಚಾರ ಬಂದಾಗ ಹಲವು ಬಾರಿ ಮಹಾತ್ಮರೂ ಜ್ಞಾನಿಗಳೂ ಋಷಿಗಳೇ ಶಪಿಸುವ ಸಂದರ್ಭಗಳು ಸೃಷ್ಟಿಯಾಗಿ ಶಿಷ್ಟರಕ್ಷಣೆ ದುಷ್ಟರ ಶಿಕ್ಷೆಯೂ ಆಗಿ ಮುಂದಿನ ಘಟನಾವಳಿಗಳಿಗೆ ಕಾರಣವಾಗಿದೆ. ಸ್ವಾಭಾವಿಕವಾಗಿ ಮನೋನಿಯಂತ್ರಣ ಹೊಂದಿದದವರೂ ಕ್ರೋಧದಲ್ಲಿ ಶಪಿಸುವ ಘಟನೆಗಳನ್ನೂ ಕಾಣಬಹುದು. ನಂತರ ಆಲೋಕಿಸಿದಾಗ ತಮ್ಮ ನಿಯಂತ್ರಣ ಮೀರಿ ಅದಾವುದೋ ಶಕ್ತಿ ತಮ್ಮ ಬಾಯಿಂದ ಶಾಪದ ವಾಕ್ಯಗಳನ್ನು ಹೇಳಿಸಿದೆ ಎಂದು ಅರಿವು ಮೂಡಿ ಸರ್ವಶಕ್ತನ ಶರಣು ಹೋಗಿದ್ದನ್ನು ಕಾಣಬಹುದು. ಹೀಗೆ ಶಾಪದ ಆಳ ಅಗಾಧತೆ ಪರಿಣಾಮ ಋಷಿಗಳ ಅರಿವಿನ ನಿಲುಕಿಗೂ ಮೀರಿದ್ದು ಎನ್ನಬಹುದು.

ರಾಮಾಯಣ ಮಹಾಭಾರತಗಳಂತೂ ನಡೆದಿದ್ದೇ ಶಾಪಗಳ ಸಲುವಾಗಿ ಎನ್ನಬಹುದು. ದಶರಥ ಕೈಕೇಯಿಗೆ ನೀಡಿದ ಮೂರು ವರಗಳು ಆತನಿಗೆ ಶಾಪವಾಗಿ ಪರಿಣಮಿಸಿ ರಾಮನ ವನವಾಸಕ್ಕೆ ಕಾರಣವಾಗಿ ಮುಂದೆಲ್ಲ ಘಟನೆಗಳಿಗೂ ಕಾರಣವಾಗುತ್ತದೆ. ರಾವಣನಿಗಿದ್ದ ಶಾಪ ಆತನಿಗೆ ಮರಣ ತರುತ್ತದೆ. ರಾಮನಿಗೆ ಒದಗಿದ ಸೀತಾವಿಯೋಗವೂ ವಿಷ್ಣುವಿಗಿದ್ದ ಶಾಪದ ಫಲವೇ. ಅಹಲ್ಯೆಯ ಶಾಪ ವಿಮೋಚನೆಗೆ ಕೊನೆಗೆ ಕಾರಣವಾಗಿದ್ದೂ ರಾಮನ ವನವಾಸದ ದೆಸೆಯಿಂದ ..ಹೀಗೆ ಒಂದಕ್ಕೊಂದು ಕೊಂಡಿಯಂತೆ ಘಟನೆಗಳ ಬೆಸುಗೆಗೆ ಶಾಪಗಳೇ ಕಾರಣ

ಮಹಾಭಾರತದ ಆದಿ ಹಾಗೂ ಅಂತ್ಯವೂ ಶಾಪ ಸೇಡಿನ ಫಲವೇ, ಪಾಂಡುವಿಗಿದ್ದ ಶಾಪ ಆತನ ಹಾಗೂ ಮಾದ್ರಿಯ ಸಹಗಮನಕ್ಕೆ ನಾಂದಿ ಹಾಡಿ ಪಾಂಡವರ ಕೌರವರ ದಾಯಾದಿ ದ್ವೇಷಕ್ಕೆ ಹಸ್ತಿನಾಪುರ ಸಾಕ್ಷಿಯಾಗುತ್ತದೆ. ಮುಂದೆ ಕುರುಕ್ಷೇತ್ರ ಯುದ್ಧವೇ ನಡೆದು ಕೌರವರು ಮಡಿದು ಗಾಂಧಾರಿಯಿಂದ ಕೃಷ್ಣ ಶಪಿಸಲ್ಪಟ್ಟು ಯಾದವರ ಕೊನೆಯಾಗುತ್ತದೆ. ಮುಂದೆ ಪರೀಕ್ಷಿತನ ಸಾವೂ ಶಾಪದ ಫಲವೇ ... ಅಂತೂ ಇದಕ್ಕೆ ಕೊನೆ ಎಂದೂ ಕಾಣದು.ಶಾಪದ ತಾಪ ನಾವು ಈ ಕಲಿಯುಗದಲ್ಲೂ ಕಾಣಬಹುದು. ಮಾನವರಾಗಿ ಪ್ರಕೃತಿಯ ಜೊತೆಗೆ ಬಾಳದೆ ದುರಾಸೆಯಿಂದ ಅದರ ಮೇಲೆ ನಿರಂತರ ದೌರ್ಜನ್ಯ ಅತ್ಯಾಚಾರ ನಡೆಸಿದ್ದೆ ಈಗ ಶಾಪವಾಗಿ ಅತಿವೃಷ್ಟಿ ಅನಾವೃಷ್ಟಿ ತ್ಸುನಾಮಿ ಗಳಾಗಿ ಎರಗಿ ಮಾನವನಿಗೆ ಶಾಪವಾಗಿ ಪರಿಣಮಿಸುತ್ತಿದೆ. ಸಂಕಟಪಟ್ಟು ಕೆಡುಕಾಗುವಂತೆ ದೂಷಿಸಿದರೆ ಅದರ ಪಾಪ ಎಂದಿಗೂ ಬಿಡದು. ಯಾರೇ ಸಂಕಟಪಟ್ಟು ಇತ್ತ ಶಾಪ ಹುಸಿಯಾಗದು ಆದ್ದರಿಂದ ಆದಷ್ಟು ಇತರರಿಗೆ ಕೆಡುಕಾಗದಂತೆ ಧರ್ಮಮಾರ್ಗದಲ್ಲಿ ನಡೆದು ಪ್ರಕೃತಿಗೆ ಪೂರಕವಾಗಿ ಬಾಳುತ್ತ ಶಾಪಗ್ರಸ್ಥರಾಗದೆ ಬದುಕು ಸಾಗಿಸುವುದು ಇಂದು ನಮಗಿರುವ ಬಹುಮುಖ್ಯ ಕರ್ತವ್ಯ

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ. **ಬೆಳಕಿನ ಹಾದಿ:** ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

**ಸಂಪಾದಕರು:** ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ. ಇ-ಮೇಲ್:hampitimes@gmail.com
M: 9448633038

ಜಾಹೀರಾತಿಗಾಗಿ ಸಂಪರ್ಕಿಸಿ:
Contact for
EVENT COVERAGE
& Advertisements
in Leading
Hampi Times
Daily News Paper
M: 94486 33038

# ಗಮನಿಸಿ...ನಾವು ಕಾರ್ಮಿಕರು

ಕಾರ್ಮಿಕರು ಎಂದರೆ ಯಾರು?....
ತಮ್ಮ ದೈನಂದಿನ ಹೊಟ್ಟೆಪಾಡಿನ ಜೀವನಕ್ಕಾಗಿ ದುಡಿಯುವ ಸರ್ಕಾರಿ, ಅರೆಸರಕಾರಿ, ಸಂಘ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುವ ಜನಸಮೂಹ. ಅಸಂಘಟಿತವಾಗಿ ಈ ಕಾರ್ಮಿಕರು ಕಾರ್ಯ ನಿರ್ವಹಿಸುತ್ತಿದ್ದಾಗ ಇವರಿಗೆ ಯಾವುದೇ ಕೆಲಸದ ಭದ್ರತೆ ಇರುತ್ತಿರಲಿಲ್ಲ. ದಿನಕ್ಕೆ 16 ಗಂಟೆಗಳ ಕಾಲ ಕಾರ್ಯನಿರ್ವಹಿಸಬೇಕಾದ ಅನಿವಾರ್ಯತೆ ಇತ್ತು. ರಜಾ ಸೌಲಭ್ಯ, ನಿಯಮಿತ ಸಂಬಳ, ಆರೋಗ್ಯ ವಿಮೆ, ಹೆಣ್ಣು ಮಕ್ಕಳಿಗೆ ಹೆರಿಗೆ ರಜೆ ಹೀಗೆ ಯಾವುದೇ ಸೌಲಭ್ಯಗಳು ಇರುತ್ತಿರಲಿಲ್ಲ.

ದುಡಿಯುವ ವರ್ಗಕ್ಕೆ ಮೂಲಭೂತ ಅವಶ್ಯಕತೆಗಳನ್ನು ಕೂಡ ಪೂರೈಸಿಕೊಳ್ಳಲು ಸಾಧ್ಯವಾಗದ ಪರಿಸ್ಥಿತಿ. ಬಂಡವಾಳ ಶಾಹಿಗಳ ಹಿಡಿತದಲ್ಲಿ ಕೂಲಿ ಕಾರ್ಮಿಕರು, ದಿನಗೂಲಿಗಳು ಕಾರ್ಯನಿರ್ವಹಿಸುವಂತಹ ಪರಿಸ್ಥಿತಿಯಲ್ಲಿ ಶ್ರೀಮಂತ ಉದ್ಯಮಿಗಳು ಅವರನ್ನು ಹಿಂಡಿ ಹಿಪ್ಪೆ ಮಾಡುತ್ತಿದ್ದರು. ಅತ್ಯಂತ ಕಡಿಮೆ ಸಂಬಳ ನೀಡಿ ದಿನದ ಮೂರನೇ ಎರಡು ಭಾಗ ಸಮಯ ಅಂದರೆ ಸುಮಾರು 16 ಗಂಟೆಗಳ ಕಾಲ ಕೆಲಸ ನಿರ್ವಹಿಸಬೇಕಾದಂತಹ ಪರಿಸ್ಥಿತಿ ಕಾರ್ಮಿಕರದು. ಆರೋಗ್ಯ ದೃಷ್ಟಿಯಿಂದ ಇದು ಹಾನಿಕಾರಕವಾಗಿದ್ದು ಕಾರ್ಮಿಕರು ದೈಹಿಕ, ಮಾನಸಿಕ ಮತ್ತು ಆರ್ಥಿಕ ಅನಾನುಕೂಲಕ್ಕೆ ಒಳಗಾದರು.



ವೀಣಾ ಹೇಮಂತಗೌಡ ಪಾಟೀಲ್
ಲೇಖಕರು, ಮುಂಡರಗಿ, ಗದಗ

Scan For Digital Colourful
HAMPI TIMES E-paper

17 ,18ನೇ ಶತಮಾನದ ಹೊತ್ತಿಗೆ ಫ್ರಾನ್ಸ್ ನ ಬಹು ದೊಡ್ಡ ಸಮಾಜವಾದಿಗಳಾದ ಕಾರ್ಲ್ ಮಾರ್ಕ್ಸ್ ಮತ್ತು ಮಾರ್ಟಿನ್ ಲೂಥರ್ ಕಿಂಗ್ ರವರು ಅಭಿವೃದ್ಧಿಪರ ಸಮಾಜದ ಕಲ್ಪನೆ ಹುಟ್ಟು ಹಾಕಿದರು. ದುಡಿಮೆಗೆ ತಕ್ಕ ಸಂಬಳ, ಆರೋಗ್ಯ, ಶಿಕ್ಷಣ, ವಸತಿ ವ್ಯವಸ್ಥೆಗಳು ಮತ್ತು ಭವಿಷ್ಯನಿಧಿ ಸ್ಥಾಪನೆಗಳ ಕುರಿತು ಯೋಜನೆಗಳನ್ನು ರೂಪಿಸಿದರು. ಸಮುದಾಯದ ಒಟ್ಟು ಅಭಿವೃದ್ಧಿಯ ಕುರಿತ ಚಿಂತನೆಯನ್ನು 'ಕಮ್ಯುನಿಸಂ' ಎಂದು ಹೆಸರಿಸಿ, ಆಡಳಿತದ ಆರ್ಥಿಕ ಮತ್ತು ರಾಜಕೀಯ ಹಿತಾಸಕ್ತಿಯು ಸಮುದಾಯದ ಕೈಯಲ್ಲಿ ಇರಬೇಕು ಎಂದು ಪ್ರತಿಪಾದಿಸಿದರು.

ಕಾರ್ಮಿಕರ ಕಲ್ಯಾಣಕ್ಕಾಗಿ ಅನೇಕ ರೀತಿಯ ಹೋರಾಟಗಳ ಮೂಲಕ ಧ್ವನಿ ಎತ್ತಿದ ಪರಿಣಾಮವಾಗಿ ಕಾರ್ಮಿಕರಿಗೂ ಒಂದು ದಿನ ಬೇಕೆಂದು ಈ ವಿಶೇಷ ದಿನ ಹುಟ್ಟಿಕೊಂಡಿತು. 1921ರಲ್ಲಿ ಅಮೆರಿಕ ಸಂಯುಕ್ತ ಸಂಸ್ಥಾನದ ಕಾರ್ಮಿಕ ಸಂಘಟನೆಯ ಅಧ್ಯಕ್ಷರಾಗಿದ್ದ ಪೀಟರ್. ಜೆ.ಜ್ಯೂರಿಯವರು ಬಡಗಿತನದ ಸಹೋದರತ್ವ ದಿನವನ್ನು ಸಂಭ್ರಮದಿಂದ ಆಚರಿಸಿದ್ದರು. ಮೊದಲು ಪ್ಯಾರಿಸ್ ದೇಶದಲ್ಲಿ ಮೇ 1ರಂದು ಕಾರ್ಮಿಕ ದಿನಾಚರಣೆ ಎಂದು 1927ರಲ್ಲಿ ಆಚರಿಸಲಾಯಿತು ಸಮಾಜವಾದಿ ಸಂಘಟನೆಗಳು, ಕಾರ್ಮಿಕ ಸಂಘಗಳು, ಬುದ್ಧಿಜೀವಿಗಳು ಸೇರಿ ಇದನ್ನು ಸ್ಥಾಪಿಸಿದರು.

2ನೇ ಮಹಾಯುದ್ಧದ ನಂತರ ಕಾರ್ಮಿಕರ ಶ್ರೇಯೋಭಿವೃದ್ಧಿಗಾಗಿ ಹಲವಾರು ತೀರ್ಮಾನಗಳನ್ನು ಕೈಗೊಳ್ಳಲಾಯಿತು. ಕಾರ್ಮಿಕರ ಕಲ್ಯಾಣ, ಕೆಲಸಕ್ಕೆ ತಕ್ಕ ಕೂಲಿ,ಸಂಭಾವನೆ, ರೋಗರು ಜಿನಗಳ ಸಮಯದಲ್ಲಿ ಧನಸಹಾಯ, ಕೆಲಸ ಮಾಡುವಲ್ಲಿ ಉತ್ತಮ ಪರಿಸರ ನಿರ್ಮಾಣ, ಆರೋಗ್ಯ, ಶಿಕ್ಷಣ,ಮಕ್ಕಳಿಗೆ ವಿದ್ಯಾರ್ಥಿ ವೇತನಗಳು,ಮಹಿಳಾಕಾರ್ಮಿಕರಿಗೆ ವಿಶೇಷ ಪ್ಯಾಕೇಜ್ ಗಳು,ವಿಮಾ ಯೋಜನೆ,ಕಾನೂನು ಸಲಹೆ ಮತ್ತು ಹೋರಾಟ, ಕೈಗಾರಿಕೆ, ಕನಿಷ್ಠ ಕೂಲಿ ನಿಗದಿ,ಈ ಮುಂತಾದ ವಿಷಯಗಳನ್ನು ಚರ್ಚೆ ಮಾಡಿ ಎಲ್ಲರಿಗೂ ಅನ್ವಯವಾಗುವಂತೆ ಜಾರಿಗೊಳಿಸುವ ಮಹಾ ಹೊಣೆಗಾರಿಕೆ ಈ ಕಾರ್ಮಿಕ ಸಂಘಟನೆಗಳ ಹೆಗಲೇರಿತು.



ಪ್ರತಿ ಗ್ರಾಮ ಪಟ್ಟಣ ನಗರ ಜಿಲ್ಲೆ ಮತ್ತು ರಾಜ್ಯ, ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಮಟ್ಟಗಳಲ್ಲಿ ಕಾರ್ಮಿಕ ಸಂಘಟನೆಗಳು ಕಾರ್ಯನಿರ್ವಹಿಸುತ್ತಿದ್ದು ಇವುಗಳ ಮುಖ್ಯ ಕೆಲಸ ಕಾರ್ಮಿಕರಿಗೆ ಸಾಮಾಜಿಕ ಭದ್ರತೆ ಒದಗಿಸುವುದು.ಮೇ 1ರಂದು ಸಭೆ,ಚರ್ಚೆ, ನಿರ್ಣಯ, ಮೆರವಣಿಗೆ, ಪ್ರದರ್ಶನ, ಉತ್ತಮ ಕಾರ್ಯ ನಿರ್ವಹಣೆಗೆ ಪ್ರೋತ್ಸಾಹ,ಪರಿಹಾರ ವಿತರಣೆ ಮುಂತಾದ ಕಾರ್ಯಕ್ರಮ ಇಟ್ಟುಕೊಳ್ಳುತ್ತಾರೆ.

ಇದರಲ್ಲಿ ಆಲೋಚನೆ ಮಾಡುವ ಅಂಶವೆಂದರೆ ಸಂಘಟಿತ,ಅಸಂಘಟಿತ ವಲಯದಲ್ಲಿ ದುಡಿಯುವ ಕಾರ್ಮಿಕರೂ ಇದ್ದಾರೆ.ಫ್ಯಾಕ್ಟರಿ, ಬೀಡಿ,ಸಾಬೂನು,ಎಣ್ಣೆ, ಬಟ್ಟೆ ಗಿರಣಿಗಳು ಊದುಬತ್ತಿ ತಯಾರಿಕೆ, ಹತ್ತಿ ಗಿರಣಿಗಳು ಮತ್ತು ಅಕ್ಕಿ ಮಿಲ್ಲುಗಳು ಗೃಹನಿರ್ಮಾಣ, ತೋಟಗಾರಿಕೆ, ಹತ್ತು ಹಲವು ಸೇರುತ್ತದೆ. ಆಯಾಯ ವಿಭಾಗದಲ್ಲಿ ಸಂಬಂಧ ಪಟ್ಟವರು ಅವರ ಸದಸ್ಯತ್ವ ಮಾಡಿ,ಅವರಿಗಿರುವ ಸೌಲಭ್ಯಗಳನ್ನು ಹೇಳಿ ಕೊಡಿಸುತ್ತಾರೆ.

ಲಕ್ಷಾಂತರ ಮಹಿಳಾ ಶ್ರಮಿಕವರ್ಗ ಶಾಲಾ ಬಿಸಿಯೂಟದ ಕೆಲಸದಲ್ಲಿ ಇರುವುದನ್ನು ಕಾಣಬಹುದು. ದಾದಿಯರು, ಅಂಗನವಾಡಿ ಕಾರ್ಯಕರ್ತರು, ಖಾಸಗಿ ಶಾಲೆಯ ಶಿಕ್ಷಕರು ಗಾರ್ಮೆಂಟ್ ಗಳಲ್ಲಿ ಕೆಲಸ ಮಾಡುವ ಮಹಿಳಾ ಕೆಲಸಗಾರ್ತಿಯರು, ಸಾಫ್ಟ್ ವೇರ್ ಮತ್ತು ಹಾರ್ಡ್ವೇರ್ ಉದ್ಯಮಗಳಲ್ಲಿ ಕಾರ್ಯನಿರ್ವಹಿಸುವ ಹೆಣ್ಣು ಮಕ್ಕಳು ಹೀಗೆ ಮಹಿಳಾ ಕಾರ್ಮಿಕರಾಗಿ ಕೋಟ್ಯಾಂತರ ಜನರು ದೇಶದ ಪ್ರಗತಿಗೆ ಅಹರ್ನಿಶಿ ಸೇವೆ ಸಲ್ಲಿಸುತ್ತಿದ್ದಾರೆ. ಮುಖ್ಯವಾಗಿ ಮಹಿಳೆಯರಿಗೆ ಶೌಚಾಲಯ ವ್ಯವಸ್ಥೆ, ಅನಾರೋಗ್ಯದ ಸಂದರ್ಭದಲ್ಲಿ ವಿಶ್ರಾಂತಿ ಕೊಠಡಿಗಳ ವ್ಯವಸ್ಥೆ ಮಹಿಳಾ ಸಿಬ್ಬಂದಿಗಳು ಕಾರ್ಯನಿರ್ವಹಿಸುವ ಸ್ಥಳದಲ್ಲಿ ಅವಶ್ಯಕತೆವಾಗಿದೆ.... ಈ ನಿಟ್ಟಿನಲ್ಲಿ ಇನ್ನೂ ಕಾರ್ಯಗಳು ನಡೆಯಬೇಕು.

ಪ್ರತಿಯೊಬ್ಬರ ಜೀವವೂ ಅಮೂಲ್ಯವಾದುದು.ಕೆಲಸ ಮಾಡುವ ಸ್ಥಳ, ಮೂಲಭೂತ ಅನುಕೂಲಗಳು,ಜೀವನ ಭದ್ರತೆ ಎಲ್ಲವೂ ಇಂದಿನ ದಿನಗಳಲ್ಲಿದೆ,ವ್ಯಾಪಕ ಪ್ರಚಾರ ಮಾಡಿ,ಮಾಹಿತಿ ನೀಡಿ ಅವರಿಗೆ ಅದನ್ನು ಒದಗಿಸಿಕೊಡುವ ಕಾರ್ಯದಲ್ಲಿ ಬಹಳಷ್ಟು ಕಾರ್ಮಿಕ ಪರ ಸಂಘಟನೆಗಳು ತೊಡಗಿಸಿಕೊಂಡಿವೆ.

12ನೇ ಶತಮಾನದಲ್ಲಿ ವಿಶ್ವಗುರು ಬಸವಣ್ಣನವರು ಕಾಯಕವೇ ಕೈಲಾಸ ಎಂದು ಶ್ರಮದ ಜೀವನಕ್ಕೆ ಭಕ್ತಿಯ ಮಾರ್ಗವನ್ನು ತೋರಿಸಿಕೊಟ್ಟರು. ಕಾರ್ಮಿಕರು ದೇಶವನ್ನು ಕಟ್ಟುವ ನಿಜವಾದ ಕಟ್ಟಾಳುಗಳು. ಅವರ ಬೆಂಬಲಕ್ಕೆ ಸಮಾಜದ ಸರ್ವ ಜನರು ಕೈಗೂಡಿಸಲಿ ಎಂದು ಹಾರೈಸುವ.

### ಸೋಲನ್ನು ಸ್ವೀಕರಿಸಲಾಗದವರು ಎಂದಿಗೂ ಗೆಲುವನ್ನು ನಿರೀಕ್ಷಿಸಲಾರರು

# ಸೋಲೆಂಬುದು ಸಾವಲ್ಲ ಮರುಹುಟ್ಟು ಪಡೆಯುವ ಸುವರ್ಣ ಸಮಯ

ದಿನನಿತ್ಯ ಪತ್ರಿಕೆಯ ಪುಟಗಳನ್ನು ತಿರುವಿ ಹಾಕುವಾಗ ಕಾಣುವ ಕೆಲವು ಸುದ್ದಿಗಳು ಮನಸ್ಸನ್ನು ಇನ್ನಿಲ್ಲದಂತೆ ಸಂಕಟದೊಳಗೆ ಮುಳುಗಿಸುತ್ತವೆ. ಯುವಕ ಯುವತಿಯರು, ಬಾಲಕ ಬಾಲಕಿಯರು, ಪುರುಷರು, ಮಹಿಳೆಯರು ಎಂಬ ಭೇದವಿಲ್ಲದೆ ಬಾಳಿ ಬೆಳಗಿ ಬದುಕ ಸವಿ ಅನುಭವಿಸಬೇಕಾದವರು ಆತ್ಮಹತ್ಯೆಯ ಕೂಪದೊಳಗೆ ಅಮೂಲ್ಯವಾದ ಬದುಕನ್ನು ಅಂತ್ಯಗೊಳಿಸಿಕೊಂಡ ಹೃದಯವಿದ್ರಾವಕ ಕತೆಗಳು. ಬದುಕು ನಮಗೆ ಸಿಕ್ಕ ಬಹು ದೊಡ್ಡ ವರ.

ಅದರ ಆನಂದವನ್ನು ಕ್ಷಣ ಕ್ಷಣವೂ ಸವಿಯುವ ಅವಕಾಶ ನಮಗಿರುವಾಗ ಅದರಿಂದ ವಿಮುಖರಾಗಿ ನಡೆಯುವ ಇಂತಹವರು ಬದುಕಿನ ಸೋಲುಗಳಿಗೆ, ವಿಫಲತೆಗಳಿಗೆ, ಸವಾಲುಗಳಿಗೆ ಅಂಜುವವರು. ಸೋಲೆಂದರೆ ಅದು ಸಹಿಸಲಾರದ ಅವಮಾನವೆಂದು ಭಾವಿಸಿದವರು. ಸೋಲೇ ಬದುಕಿನ ಅಂತ್ಯ ಎಂಬ ಭ್ರಮೆಗೊಳಗಾದವರು. ಸೋಲು ಖಂಡಿತ ಅವನತಿಯಲ್ಲ; ಅದು ಗೆಲುವಿನ ಮೆಟ್ಟಿಲು. ಜೀವನದಲ್ಲಿ ಎದುರಾಗುವ ಸೋಲುಗಳು ನಮಗೆ ಮುಂದೆ ನಾವು ನಡೆಯಬೇಕಾದ ದಾರಿ ತೋರುವ ಗುರುಗಳಂತೆ. ಅವು ಕಲಿಸುವ ಪಾಠಕ್ಕಿಂತ ದೊಡ್ಡ ಅನುಭವ ಬೇರಾವುದೂ ಇಲ್ಲ.



ಭವ್ಯ ಟಿ.ಎಸ್. ಶಿಕ್ಷಕಿ
ಹೊಸನಗರ, ಶಿವಮೊಗ್ಗ

Scan For Digital Colourful
HAMPI TIMES E-paper

ಇಂದು ನಾವೆಲ್ಲರೂ ಸ್ಪರ್ಧಾತ್ಮಕ ಜಗತ್ತಿನಲ್ಲಿ ಇದ್ದೇವೆ. ಇಲ್ಲಿ ಗೆಲ್ಲುವವರಿಗೆ ಮಾತ್ರ ಮನ್ನಣೆ ಇದೆ ಎಂಬುದನ್ನು ಪೋಷಕರು, ಸಮಾಜ, ಶಿಕ್ಷಣ ಯುವ ಜನಾಂಗಕ್ಕೆ ಹೇಳುವುದರಿಂದ ಒಂದು ಪರೀಕ್ಷೆಯ ವಿಫಲತೆಯನ್ನು ತಡೆದುಕೊಳ್ಳುವ ಶಕ್ತಿ ಅವರಿಗಿಲ್ಲದೆ ಆತ್ಮಹತ್ಯೆ, ಖಿನ್ನತೆ ಎಡೆಗೆ ಸಾಗುತ್ತಿದ್ದಾರೆ. ಸೋಲನ್ನು ಸ್ವೀಕರಿಸಲಾಗದವರು ಎಂದಿಗೂ ಗೆಲುವನ್ನು ನಿರೀಕ್ಷಿಸಲಾರರು. ಸೋಲೆಂಬುದು ಸಾವಲ್ಲ; ಅದು ನಾವು ಮರುಹುಟ್ಟು ಪಡೆಯುವ ಸುವರ್ಣ ಸಮಯ. ನಾವೇಕೆ ಸೋತೆವು, ಎಲ್ಲಿ ಎಡವಿದೆವು ಎಂದು ಆತ್ಮಾವಲೋಕನಕ್ಕೆ ಒಡ್ಡುವ ಸುಂದರ ಅವಕಾಶ. ನಮ್ಮೊಳಗಿನ ಆತ್ಮವಿಶ್ವಾಸವನ್ನು ಬಲಪಡಿಸುವ ಸಾಧನ.

ಸಾಧಕರ ಯಶೋಗಾಥೆಗಳನ್ನು ಕೇಳಿದಾಗ ಅತ್ಯಂತ ಕ್ಲಿಷ್ಟಕರವಾದ ಪರಿಸ್ಥಿತಿಗಳೇ ಅವರನ್ನು ಯಶಸ್ಸಿನೆಡೆಗೆ ನಡೆಸಿದ ಶಕ್ತಿ ಎಂಬುದು ತಿಳಿಯುತ್ತದೆ. ವಾಸ್ತವದ ಅರಿವಿನ ಜೊತೆಗೆ ಮುನ್ನಡೆಯುವವನು ಮಾತ್ರ ಸೋಲನ್ನು ಸಕಾರಾತ್ಮಕವಾಗಿ ಸ್ವೀಕರಿಸಲು ಸಾಧ್ಯ.

**ಸೋತಾಗ ನಮ್ಮ ಮನಸ್ಸಿಗೆ ಹೇಳಿಕೊಳ್ಳಬೇಕಾದ ಮಾತುಗಳು.**
**ಸೋಲು ಶಾಶ್ವತವಲ್ಲ:** ಅವಕಾಶಗಳ ಬಾಗಿಲು ಸಂಪೂರ್ಣವಾಗಿ ಮುಚ್ಚಿಲ್ಲ: ದುರ್ಬಲ ಮನಸ್ಥಿತಿಯವರು ಸೋಲು ಶಾಶ್ವತ ಪರಿಸ್ಥಿತಿ ಎಂದು ಭಾವಿಸಿಕೊಂಡು ಉತ್ಕಟವಾದ ನೋವನ್ನು ಅನುಭವಿಸುತ್ತಾರೆ. ಹತಾಶೆಗೆ ಜಾರುತ್ತಾರೆ. ತಮ್ಮ ಮುಂದಿರುವ ಅವಕಾಶಗಳ ಕಡೆ ನೋಡದೆ ಇದೇ ಬದುಕಿನ ಅಂತ್ಯವೆಂದುಕೊಳ್ಳುತ್ತಾರೆ. ಈ ಅವಕಾಶವಷ್ಟೇ ಕೈ ತಪ್ಪಿದೆ. ಮುಂದಿನ ಬಾರಿ ನನ್ನ ತಪ್ಪುಗಳನ್ನು ತಿದ್ದಿಕೊಂಡು ಸತತ ಪ್ರಯತ್ನದಿಂದ ಯಶಸ್ಸನ್ನು ಪಡೆಯುವೆನೆಂಬ ಛಲ ಮನದೊಳಗೆ ಮೂಡಿಬರಲಿ.

**ಗೆಲುವಿನ ಸಿಹಿ ಪಡೆಯಬೇಕೆಂದರೆ ಸೋಲಿನ ಕಹಿಯನ್ನು ಸ್ವೀಕರಿಸಲೇಬೇಕು:** ನಮಗೆ ಎದುರಾಗುವ ಸೋಲು ಅತ್ಯಂತ ಕಹಿಯೆನಿಸಬಹುದು. ಆದರೆ ಅದು ಆ ಕ್ಷಣಕ್ಕಷ್ಟೇ ಸೀಮಿತ. ಗೆಲುವಿನ ರಹದಾರಿ ಅದು. ಸೋಲುಗಳೆಂಬ ಮುಳ್ಳು ಹಾಸಿನ ಮೇಲೆ ಧೈರ್ಯಗುಂದದೆ ನಡೆದಾಗ ಗೆಲುವಿನ ಹೂವನದಲ್ಲಿ ಸಿಹಿ ಅನುಭವ ಪಡೆಯಲು ಸಾಧ್ಯ.

**ನಮಗಿಂತ ಕಠಿಣ ಪರಿಸ್ಥಿತಿಯಲ್ಲಿ ಗೆದ್ದು ಬಂದವರ ಯಶೋಗಾಥೆಗಳನ್ನು ಕೇಳಿರಿ:** ನಾವು ಸಾಧಕರ ಬದುಕನ್ನು ಅಧ್ಯಯನ ಮಾಡಬೇಕು. ಅವರು ಎದುರಿಸಿದ ಕ್ಲಿಷ್ಟಕರವಾದ ಸಂದರ್ಭಗಳು,ಅವರ ಸಾಧನೆಯ ಛಲ, ನಿರಂತರ ಪ್ರಯತ್ನ , ಕಠಿಣ ಪರಿಶ್ರಮ ಇವುಗಳನ್ನು ನಾವು ಸಹ ಬದುಕಲ್ಲಿ ಅಳವಡಿಸಿಕೊಳ್ಳಬೇಕು.

**ನಮ್ಮ ಬದುಕೇ ನಮಗೆ ಗುರು:** ಬದುಕಿನ ಅನುಭವಗಳಿಗಿಂತ ದೊಡ್ಡ ಗುರು ಬೇರೆ ಯಾರೂ ಇಲ್ಲ. ಇಲ್ಲಿ ಪ್ರತಿದಿನವೂ ಒಂದು ಹೊಚ್ಚಹೊಸ ಪಾಠವನ್ನು ಕಲಿಯುತ್ತಲೇ ಇರುತ್ತೇವೆ. ಅದನ್ನು ಗ್ರಹಿಸುವ ಸೂಕ್ಷ್ಮ ಪ್ರಜ್ಞೆ ನಮ್ಮೊಳಗಿರಬೇಕು. ನಾವು ನಾವಾಗಿರುವುದರಲ್ಲಿ ಆತ್ಮತೃಪ್ತಿ ಇದೆ : ನಾವು ಗೆಲುವು ಸಾಧಿಸಲು ಇರುವ ಬಹುದೊಡ್ಡ ಅಡ್ಡಿ ಎಂದರೆ ನಮ್ಮನ್ನು ಇತರರೊಂದಿಗೆ ಹೋಲಿಸಿಕೊಳ್ಳುತ್ತಾ ಕುಗ್ಗುವುದು.ನಮ್ಮ ಬಗ್ಗೆ ನಮಗೆ ಆತ್ಮವಿಶ್ವಾಸ ಇರಬೇಕು. ನಮ್ಮತನದಲ್ಲಿ ನಮಗೆ ನಂಬಿಕೆಬಿರಬೇಕು. ಅನ್ಯರನ್ನು ಅನುಕರಿಸುತ್ತಾ, ಓಲೈಸುತ್ತಾ ನಮ್ಮ ಬಗ್ಗೆ ನಾವು ತಾತ್ಸಾರ ಬೆಳೆಸಿಕೊಳ್ಳಬಾರದು.

ಸದಾ ನಮ್ಮ ಮನಸ್ಸನ್ನು ಸಕಾರಾತ್ಮಕ ಶಕ್ತಿ ಬೆಳೆಸಿಕೊಳ್ಳಲು ಪ್ರೇರೇಪಿಸಬೇಕು. ಮನಸ್ಸಿನ ಶಕ್ತಿ ಅಗಾಧವಾದುದು. ಅದನ್ನು ಸಕಾರಾತ್ಮಕವಾಗಿ ಪ್ರೇರೇಪಿಸಿದಷ್ಟೂ ನಮ್ಮ ಗೆಲುವಿಗೆ ಅದರಿಂದ



ಸ್ಫೂರ್ತಿ ದೊರಕುತ್ತದೆ. ಪ್ರೀತಿ, ಸಹನೆ, ಸೃಜನಶೀಲ ಮನೋಭಾವ ನಮ್ಮಲ್ಲಿ ಸಕಾರಾತ್ಮಕ ಮನೋಭಾವವನ್ನು ಬೆಳೆಸುತ್ತವೆ.

**ಅಸಾಧ್ಯವೆಂಬುದಿಲ್ಲ ಎಂಬ ದೃಢತೆ ಇರಲಿ:** ಸೋತರೂ ಧೃತಿಗೆಡದೆ ಸಂಕಷ್ಟಗಳನ್ನು ಗೆದ್ದು ಬದುಕಿದವರನ್ನು ಆದರ್ಶವಾಗಿ ಸ್ವೀಕರಿಸಬೇಕು. ನಿಂತ ನೀರಾಗಿ ಕೊಳೆಯದೆ ಎಲ್ಲದರ ಸಾರ ಹೊತ್ತು ಹರಿಯುತಿರಬೇಕು. ನಮ್ಮನ್ನು ನಾವು ಪ್ರೀತಿಸುವ ಹಂಬಲ ಬದುಕಿನ ಉತ್ಸಾಹವನ್ನು ಹೆಚ್ಚಿಸುತ್ತದೆ. ಆತ್ಮವಿಶ್ವಾಸ, ಹೊಂದಾಣಿಕೆ, ಸ್ವಾವಲಂಬನೆ ರೂಢಿಸಿಕೊಂಡರೆ ಯಶಸ್ವಿಗಳಾಗಲು ಸಾಧ್ಯ.

**ನರಳುವ ಸ್ವಭಾವವನ್ನು ತೊರೆಯಿರಿ:** ಸದಾ ನಮ್ಮ ಕೊರತೆಗಳನ್ನು ನೆನೆದು ನರಳುವ ಸ್ವಭಾವದಿಂದ ಹೊರಬರಬರಬೇಕು. ಟೀಕಿಸುವ ಗುಣ ನಮ್ಮ ಸಂತಸಗಳನ್ನು ಕಸಿದುಕೊಳ್ಳುತ್ತದೆ. ನಮ್ಮನ್ನು ಸದಾ ಇನ್ನೊಬ್ಬರಿಗೆ ಹೋಲಿಸಿಕೊಳ್ಳುತ್ತಾ ಅನ್ಯರ ಏಳಿಗೆ ಸಹಿಸದೆ ಅಸೂಯೆಪಡುತ್ತಾ ವಾಸ್ತವ ಮರೆತು ಭ್ರಮಾ ಲೋಕಕ್ಕೆ ಹಾತೊರೆದರೆ ನಿರಾಸೆ ನಮ್ಮನ್ನು ಸುಡುತ್ತಾ ಬದುಕನ್ನು ನಾವು ಮೊದಲು ಪ್ರೀತಿಸತೊಡಗಿದರೆ ಅದು ನಮಗೆ ಸಂತೋಷವನ್ನೇ ನೀಡುತ್ತದೆ. ನಮ್ಮೊಳಗೊಂದು ಸುಂದರವಾದ ಲೋಕವಿದೆ. ಅದನ್ನು ನಾವು ಮಲಿನಗೊಳಿಸದೇ ಕಾಯಬೇಕು. ನಮ್ಮ ರೂಪ, ನಮ್ಮ ವ್ಯಕ್ತಿತ್ವ, ನಮ್ಮ ವಿಶೇಷತೆಗಳನ್ನು ನಾವು ಮೊದಲು ಮೆಚ್ಚಬೇಕು. ನಮಗೆ ನಾವು ಉತ್ತಮ ಸ್ನೇಹಿತರಾಗಬೇಕು. ನಮ್ಮೊಡನೆ ನಾವು ನಿತ್ಯವೂ ಮಾತನಾಡಬೇಕು. ನಮ್ಮನ್ನು ನಾವು ಅರಿತು ಪರಿಸ್ಥಿತಿಗಳ ಕೈಗೊಂಬೆಯಾಗದೆ, ಎದುರಿಸಿ ಗೆದ್ದೇ ಗೆಲ್ಲುವೆ ಎಂಬ ಉತ್ಸಾಹದಿಂದ ಮುನ್ನಡೆಯುತಿರಬೇಕು.

# ಭಾರತದ ಭವಿಷ್ಯ ನಿಮ್ಮ ಮತದಾನದಲ್ಲಿದೆ

## ನಿತ್ಯ ಪಂಚಾಂಗ

ಮಾಸ: ಚೈತ್ರ । ಸಂವತ್ಸರ: ಕ್ರೋಧಿ

**01–05–2024 – ಬುಧವಾರ**

| | |
|---|---|
| ತಿಥಿ | : ಅಷ್ಟಮಿ |
| ಪಕ್ಷ | : ಕೃಷ್ಣ |
| ನಕ್ಷತ್ರ | : ಶ್ರಾವಣ |
| ಯೋಗ | : ಶುಭ |
| ಕರಣ | : ಬಾಳವ |
| ಸೂರ್ಯೋದಯ | : 05:54:49 |
| ಸೂರ್ಯಾಸ್ತ | : 18:53:26 |
| ರಾಹು | : 12:24–14:01 |
| ಯಮಘಂಡ | : 07:32–09:09 |
| ಗುಳಿಕ | : 10:47–12:24 |

## ತುಂಗಭದ್ರಾ ನೀರಿನ ಮಟ್ಟ



ಮಂಗಳವಾರ : 30–04–2024

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1578.14 ಅಡಿ |
| ಒಳ ಹರಿವು | 00 ಕ್ಯುಸೆಕ್ |
| ಹೊರ ಹರಿವು | 305 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 3.631 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| **ಕಳೆದ ವರ್ಷ ಇದೇ ದಿನ** | |
| ಇಂದಿನ ಮಟ್ಟ | 1575.89 ಅಡಿ |
| ಒಳ ಹರಿವು | 00 ಕ್ಯುಸೆಕ್ |
| ಹೊರ ಹರಿವು | 258 ಕ್ಯುಸೆಕ್ |
| ಸಾಮರ್ಥ್ಯ | 2.787 ಟಿಎಂಸಿ |

# ಮೇ 7ಕ್ಕೆ ಮತದಾನ ಹಬ್ಬ ಆಚರಿಸಿ

### ತಾಪಂ ಇಓ ಕೆ.ವಿ.ನಿರ್ಮಲಾ ಹೇಳಿಕೆ। ಮನರೇಗಾ ಕೂಲಿಕಾರರಿಗೆ ಮತದಾನ ಜಾಗೃತಿ



**ಹಂಪಿ ಟೈಮ್ಸ್ ಬಳ್ಳಾರಿ**

ಮೇ 07 ರಂದು ನಡೆಯುವ ಲೋಕಸಭೆ ಚುನಾವಣೆಗೆ ತಪ್ಪದೇ ಮತದಾನ ಮಾಡುವ ಮೂಲಕ ಮತದಾನ ದಿನದ ಹಬ್ಬ ಆಚರಿಸುವಂತೆ ಕುರುಗೋಡು ತಾಲ್ಲೂಕು ಸ್ವೀಪ್ ನೋಡೆಲ್ ಅಧಿಕಾರಿ ಹಾಗೂ ತಾಪಂ ಇಓ ಕೆ.ವಿ.ನಿರ್ಮಲಾ ಹೇಳಿದರು.

ಕುರುಗೋಡು ತಾಲ್ಲೂಕಿನ ಸಿಂಧಿಗೇರಿ ಗ್ರಾಮದ ಸರಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆಯ ಆವರಣದಲ್ಲಿ 'ಮತದಾನ ನಮ್ಮ ಹಕ್ಕು, ಕಡ್ಡಾಯವಾಗಿ ಮತದಾನ ಮಾಡಿ' ಎಂಬ ಆಶಯದೊಂದಿಗೆ ಮನರೇಗಾ ಯೋಜನೆಯಡಿ ಕೂಲಿಕಾರರಿಗೆ ಮಂಗಳವಾರ ಹಮ್ಮಿಕೊಂಡಿದ್ದ ಮತದಾನ ಜಾಗೃತಿ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಪ್ರತಿ ಮತವೂ ಅತ್ಯಮೂಲ್ಯವಾಗಿದ್ದು, ಸಂವಿಧಾನ ಬದ್ಧವಾಗಿ ಲಭಿಸಿರುವ ಮತದಾನದ ಹಕ್ಕನ್ನು ಪ್ರತಿಯೊಬ್ಬರು ತಪ್ಪದೇ ಚಲಾಯಿಸಬೇಕು. ಪ್ರಜಾಪ್ರಭುತ್ವವನ್ನು ಗಟ್ಟಿಗೊಳಿಸುವಲ್ಲಿ ಮತದಾನದ ಮೂಲಕ ಅರ್ಹರನ್ನು ಆಯ್ಕೆ ಮಾಡಲು ಇರುವ ಒಂದು ಅಸ್ತ್ರವಾಗಿದೆ ಎಂದು ಅರಿವು ಮೂಡಿಸಿದರು.

ಈ ವೇಳೆ ಮತದಾರರ ಪ್ರತಿಜ್ಞೆ ವಿಧಿ ಬೋಧಿಸುವುದರ ಮೂಲಕ ಕೂಲಿಕಾರರಿಗೆ ಮತದಾನದ ಜಾಗೃತಿ ಮೂಡಿಸಿದರು.

ಈ ಸಂದರ್ಭದಲ್ಲಿ ತಾಲ್ಲೂಕು ಯೋಜನಾಧಿಕಾರಿ ರಾಧಿಕಾ, ಗ್ರಾಪಂ ಕಾರ್ಯದರ್ಶಿ ಸೋಮಲಿಂಗಪ್ಪ, ಟಿಎಂಐಎಸ್ ಮುಕ್ತಾಯಕ್ಕ, ಐಇಸಿ ಚಂದ್ರಶೇಖರ್, ಎನ್ಆರ್ಎಲ್ಎಂ ತಂಡ, ಬಿಎಫ್‌ಟಿ, ಗ್ರಾಮಕಾಯಕ ಮಿತ್ರರು, ಸ್ವ ಸಹಾಯ ಸಂಘದ ಸದಸ್ಯರು, ಗ್ರಾಪಂ ಸಿಬ್ಬಂದಿಯವರು ಸೇರಿದಂತೆ ಸಿಂಧಿಗೇರಿ ಗ್ರಾಮದ ಕೂಲಿಕಾರರು ಹಾಜರಿದ್ದರು.

## ವಿಜ್ಞಾನ

# ಚರ್ಮ ಏಕೆ ಸುಕ್ಕುಗಟ್ಟುತ್ತದೆ?

**ಆರ್.ಬಿ.ಗುರುಬಸವರಾಜ**

ತೇಜಸ್ವಿಯು ಮಲಗಿದ್ದ ಅಜ್ಜಿಯನ್ನು ಎತ್ತಿ ಕೂಡಿಸಲು ಹೋದ. ಅವನದ್ದು ಸ್ವಲ್ಪ ಅವಸರ ಪ್ರವೃತ್ತಿ. ಇದನ್ನು ತಿಳಿದಿದ್ದ ಅಜ್ಜಿ 'ಮೆತ್ತಗೆ ಹಿಡಿದುಕೋ, ಇಲ್ಲಾಮದ್ರೆ ಚರ್ಮ ಕಿತ್ತು ಬಂದೀತು' ಎಂದರು. ಅಜ್ಜಿಯ ರಟ್ಟೆಯನ್ನು ಮೆತ್ತಗೆ ಹಿಡಿದು ಎಬ್ಬಿಸಿ ಕೂರಿಸಿದ. ಮತ್ತೊಮ್ಮೆ ಅಜ್ಜಿಯ ಕೈ ಮತ್ತು ಮುಖದ ಮೇಲೆ ಕೈಯಾಡಿಸಿದ. ಚರ್ಮವೆಲ್ಲ ಕಿತ್ತುಬರುವಂತೆ ಸುಕ್ಕುಸುಕ್ಕಾಗಿತ್ತು. ಆಗ ಅಲ್ಲಿಗೆ ಬಂದ ಅಮ್ಮನನ್ನು ಕೇಳಿದ. "ಅಮ್ಮ ಅಜ್ಜಿಯ ಚರ್ಮ ಏಕೆ ಸುಕ್ಕುಗಟ್ಟಿದೆ?" ಎಂದ. ಅದಕ್ಕೆ ಅಮ್ಮನ ಉತ್ತರ ಹೀಗಿತ್ತು.

ಚರ್ಮ ಸುಕ್ಕುಗಟ್ಟುವಿಕೆ ಒಂದು ನೈಸರ್ಗಿಕ ಪ್ರಕ್ರಿಯೆ. ವಯಸ್ಸಾದಂತೆ ಪ್ರತಿಯೊಬ್ಬರ ಚರ್ಮವೂ ಸುಕ್ಕುಗಟ್ಟುತ್ತದೆ. ಸ್ಥಿತಿಸ್ಥಾಪಕತ್ವದ ನಷ್ಟದಿಂದ ಚರ್ಮವು ಸುಕ್ಕುಗಟ್ಟುತ್ತದೆ. ವಯಸ್ಸಾದಂತೆ ನಮ್ಮ ಚರ್ಮವು ನೈಸರ್ಗಿಕವಾಗಿ ಕಳೆಗುಂದುತ್ತದೆ ಮತ್ತು ದೈಹಿಕ ಸ್ಥಿತಿಸ್ಥಾಪಕತ್ವವನ್ನು ಕಳೆದುಕೊಳ್ಳುತ್ತದೆ. ಇದರಿಂದ ಚರ್ಮವು ತೆಳುವಾಗುವುದು, ಕುಗ್ಗುವಿಕೆ ಮತ್ತು ಸುಕ್ಕುಗಟ್ಟುವಿಕೆಗೆ ಕಾರಣವಾಗುತ್ತದೆ.



ಚರ್ಮದ ಸುಕ್ಕುಗಟ್ಟುವಿಕೆಗೆ ಇತರ ಅಂಶಗಳು ಕಾರಣವಾಗಿವೆ. ಸೂರ್ಯನ ಅತಿನೇರಳೆ ಕಿರಣಗಳಿಗೆ ಒಡ್ಡಿಕೊಳ್ಳುವುದು ಮತ್ತು ಕಳಪೆ ಪೋಷಣೆಯೂ ಸಹ ಚರ್ಮ ಸುಕ್ಕುಗಟ್ಟಲು ಕಾರಣವಾಗಿವೆ. ಹಾನಿಕಾರಕ ಪರಿಸರ ಅಂಶಗಳೂ ಸಹ ಚರ್ಮ ಸುಕ್ಕುಗಟ್ಟಲು ಕಾರಣವಾಗಿವೆ. ಧೂಮಪಾನವು ಸಹ ಚರ್ಮ ಸುಕ್ಕುಗಟ್ಟಲು ಕಾರಣವಾಗಿದೆ. ಧೂಮಪಾನವು ನಮ್ಮ ಚರ್ಮದಲ್ಲಿನ ರಕ್ತನಾಳಗಳನ್ನು ಕಿರಿದಾಗುವಂತೆ ಮಾಡುತ್ತದೆ. ಇದರಿಂದ ರಕ್ತದ ಹರಿವು ಮತ್ತು ಚರ್ಮಕ್ಕೆ ಆಮ್ಲಜನಕವನ್ನು ಕಡಿಮೆ ಮಾಡುತ್ತದೆ. ಇದು ಅಕಾಲಿಕ ಸುಕ್ಕುಗಳಿಗೆ ಕಾರಣವಾಗಬಹುದು.

ನಾವು ವಯಸ್ಸಾದಂತೆ ಚರ್ಮದ ಸಂಯೋಜಕ ಅಂಗಾಂಶಗಳು ದುರ್ಬಲಗೊಳ್ಳುತ್ತವೆ. ಇದರಿಂದ ನಮ್ಮ ಚರ್ಮವು ಸ್ಥಿತಿಸ್ಥಾಪಕತ್ವವನ್ನು ಕಳೆದುಕೊಳ್ಳುತ್ತದೆ. ಚರ್ಮವು ತೆಳ್ಳಗಾಗುತ್ತದೆ ಮತ್ತು ಸುಕ್ಕುಗಳಿಗೆ ಹೆಚ್ಚು ಒಳಗಾಗುತ್ತದೆ. ಅನುವಂಶಿಕ ಅಂಶಗಳೂ ಸಹ ಚರ್ಮ ಸುಕ್ಕುಗಟ್ಟಲು ಕಾರಣವಾಗಿವೆ. ಏಕೆಂದರೆ ಕೆಲವರಿಗೆ ಮುಪ್ಪಾವಸ್ಥೆಗಿಂತ ಮುಂಚೆಯೇ ಚರ್ಮವು ಸುಕ್ಕುಗಟ್ಟುತ್ತದೆ. ಅಂತೆಯೇ ದೇಹವು ನಿರ್ಜಲೀಕರಣಗೊಂಡಾಗ ನಮ್ಮ ಚರ್ಮವು ತೇವಾಂಶವನ್ನು ಕಳೆದುಕೊಳ್ಳುತ್ತದೆ. ಆಗ ಸುಕ್ಕುಗಳು ಹೆಚ್ಚು ಗಮನಕ್ಕೆ ಬರುತ್ತವೆ. ಕಾಲಾನಂತರದಲ್ಲಿ ಮುಖದ ಅಭಿವ್ಯಕ್ತಿಗಳನ್ನು ಮಾಡಲು ಬಳಸುವ ಮುಖದಲ್ಲಿನ ಸ್ನಾಯುಗಳು ಚರ್ಮದಲ್ಲಿ ಸುಕ್ಕುಗಳನ್ನು ಉಂಟುಮಾಡಬಹುದು. ವಿಶೇಷವಾಗಿ ಕಣ್ಣುಗಳು, ಬಾಯಿ ಮತ್ತು ಹಣೆಯ ಸುತ್ತಲೂ ಚರ್ಮ ಸುಕ್ಕುಗಟ್ಟುವುದನ್ನು ಗಮನಿಸಬಹುದು.

# ಅಕ್ರಮ ಮದ್ಯ ಸಾಗಾಣಿಕೆ ಮೂರು ಪ್ರಕರಣ ದಾಖಲು

**ಹಂಪಿ ಟೈಮ್ಸ್ ಬಳ್ಳಾರಿ**

ಲೋಕಸಭೆ ಚುನಾವಣೆ ನೀತಿ ಸಂಹಿತೆ ಹಿನ್ನೆಲೆಯಲ್ಲಿ ಅಕ್ರಮವಾಗಿ ಮದ್ಯ ಸಾಗಾಣಿಕೆ ಸಂಬಂಧಿಸಿದಂತೆ ಅಬಕಾರಿ ಪೊಲೀಸ್ ಅಧಿಕಾರಿಗಳಿಂದ ವಿವಿಧೆಡೆ ದಾಳಿ ನಡೆಸಿ 3 ಪ್ರಕರಣಗಳನ್ನು ದಾಖಲಿಸಲಾಗಿದೆ ಎಂದು ಅಬಕಾರಿ ಉಪ ಆಯುಕ್ತ ಮಂಜುನಾಥ. ಎನ್ ಅವರು ತಿಳಿಸಿದ್ದಾರೆ.

ಬಳ್ಳಾರಿ ನಗರದ ಕೇಂದ್ರ ಬಸ್ ನಿಲ್ದಾಣದ ಬಳಿ ಇರುವ ಜೋಳದರಾಶಿ ದೊಡ್ಡನಗೌಡರ ರಂಗಮಂದಿರದ ಗೇಟ್ ಮುಂದೆ ಮುಖ್ಯ ರಸ್ತೆಯಲ್ಲಿ ರಸ್ತೆಗಾವಲು ವೇಳೆ ದ್ವಿಚಕ್ರ ವಾಹನದಲ್ಲಿ 8.640 ಲೀ. (ಅಂದಾಜು ಮೌಲ್ಯ ರೂ.13840) ಮದ್ಯವನ್ನು ಸಾಗಾಣಿಕೆ ಮಾಡುತ್ತಿರುವುದನ್ನು ಪತ್ತೆಹಚ್ಚಿ, ವಾಹನ ಸವಾರ ವಶಕ್ಕೆ ಪಡೆದುಕೊಂಡು ಮದ್ಯ ಹಾಗೂ ವಾಹನವನ್ನು ಜಪ್ತುಪಡಿಸಲಾಗಿದೆ.



ಸಿರುಗುಪ್ಪ ನಗರದ ಮಹಾತ್ಮಗಾಂಧಿ ವೃತ್ತದಲ್ಲಿ ರಸ್ತೆಗಾವಲು ಸಂದರ್ಭದಲ್ಲಿ ದ್ವಿಚಕ್ರ ವಾಹನದಲ್ಲಿ 8.640 ಲೀಟರ್ ಮದ್ಯ ಮತ್ತು 15.600 ಲೀಟರ್ ಬಿಯರ್ (ಅಂದಾಜು ಮೌಲ್ಯ ರೂ.42501) ಅನ್ನು ಸಾಗಾಣಿಕೆ ಮಾಡುತ್ತಿರುವುದನ್ನು ಪತ್ತೆಹಚ್ಚಿ, ವಾಹನ ಸವಾರನ್ನು, ಮದ್ಯ, ಬಿಯರ್ ಹಾಗೂ ವಾಹನವನ್ನು ಜಪ್ತುಪಡಿಸಿ ಪ್ರಕರಣ ದಾಖಲಿಸಲಾಗಿದೆ.

ಬಳ್ಳಾರಿ ನಗರದ ಹೊಸಪೇಟೆ ರಸ್ತೆಯಲ್ಲಿ ರಸ್ತೆಗಸ್ತು ವೇಳೆ ದ್ವಿಚಕ್ರ ವಾಹನದಲ್ಲಿ 4.320 ಲೀ. (ಅಂದಾಜು ಮೌಲ್ಯ ರೂ.46920) ಮದ್ಯವನ್ನು ಪತ್ತೆಹಚ್ಚಿ, ವಾಹನ ಸವಾರ, ಮದ್ಯ ಹಾಗೂ ವಾಹನವನ್ನು ಜಪ್ತುಪಡಿಸಿ ಮಾಡಿ ಪ್ರಕರಣ ದಾಖಲಿಸಲಾಗಿದೆ ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಸಿ.ಲಕ್ಷ್ಮೀಪತಿ ನಿಧನ

**ಹೊಸಪೇಟೆ:** ನಗರದ ರಾಣಿಪೇಟೆ ನಿವಾಸಿ ಹಾಗೂ ಸವಿತಾ ಸಮಾಜದ ಅಧ್ಯಕ್ಷ ಸಿ. ಲಕ್ಷ್ಮೀಪತಿ (78) ಮಂಗಳವಾರ ನಿಧನರಾಗಿದ್ದಾರೆ. ಮೃತರು ಪತ್ನಿ, ಹೊಸಪೇಟೆ ಪಟ್ಟಣ ಪೊಲೀಸ್ ಠಾಣೆಯ ಪೇದೆ ಸೂರ್ಯನಾರಾಯಣ ಸೇರಿದಂತೆ ಮೂವರು ಪುತ್ರರು, ಮೂವರು ಪುತ್ರಿಯರು ಹಾಗೂ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ.



ಬುಧವಾರ ಬೆಳಗ್ಗೆ 9 ಗಂಟೆಗೆ ನಗರದ ಹಂಪಿ ರಸ್ತೆಯಲ್ಲಿರುವ ರುದ್ರಭೂಮಿಯಲ್ಲಿ ಮೃತರ ಅಂತ್ಯಕ್ರಿಯೆ ನೆರವೇರಿಸಲಾಗುತ್ತದೆ ಎಂದು ಕುಟುಂಬಸ್ಥರು ತಿಳಿಸಿದ್ದಾರೆ.

ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
ಕನ್ನಡ ದಿನ ಪತ್ರಿಕೆ
ವಿಜಯನಗರ ಜಿಲ್ಲೆಯ ಸಮಗ್ರ ಸುದ್ದಿ, ವಿಜ್ಞಾನ, ವಿಶೇಷ ಲೇಖನಗಳನ್ನು ಓದಲಿಚ್ಚಿಸುವವರು ಈ ಕೆಳಗಿನ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ, ವಾಟ್ಸಪ್ ಗ್ರೂಪಿಗೆ ಜಾಯಿನ್ ಆಗಿ ಹಂಪಿ ಟೈಮ್ಸ್ ಇ-ಪತ್ರಿಕೆ ಓದಿರಿ.
HAMPI TIMES VIJAYANAGARA
Only Admins can Send Messages to this Group
Join for to Get Daily E-paper

# 6 ಕೆ.ಜಿ. ಗಾಂಜಾ ವಶ, ಆರೋಪಿ ಬಂಧನ



**ಹಂಪಿ ಟೈಮ್ಸ್ ಬಳ್ಳಾರಿ**

ಲೋಕಸಭಾ ಸಾರ್ವತ್ರಿಕ ಚುನಾವಣೆ ನಿಮಿತ್ಯ ಅಕ್ರಮ ಚಟುವಟಿಕೆಗಳ ತಡೆಗೆ ತೀವ್ರ ನಿಗಾ ವಹಿಸಲಾಗುತ್ತಿದ್ದು, ಇದರ ಅಂಗವಾಗಿ ಬಳ್ಳಾರಿ ರೈಲ್ವೆ ಪೊಲೀಸರು ಕಳೆದ ಏ.28 ಭಾನುವಾರದಂದು ಮೈಸೂರು–ಹುಬ್ಬಳ್ಳಿ ಮಾರ್ಗದ ಹಂಪಿ ಎಕ್ಸ್‌ಪ್ರೆಸ್ ರೈಲಿನಲ್ಲಿ ತಪಾಸಣೆ ನಡೆಸುವ ಸಂದರ್ಭದಲ್ಲಿ 06 ಕೆ.ಜಿ. ಗಾಂಜಾ ಸಾಗಿಸುತ್ತಿದ್ದುದನ್ನು ಪತ್ತೆಹಚ್ಚಿ, ಓರ್ವ ಆರೋಪಿಯನ್ನು ಗಾಂಜಾ ಸಮೇತ ಬಂಧಿಸಿ, ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಆರೋಪಿಯನ್ನು ಆಂಧ್ರಪ್ರದೇಶದ ಅನಂತಪುರಂ ಜಿಲ್ಲೆ ಗುಂತಕಲ್‌ನ ತಿಲಕ್ ನಗರದ ವಾಸಿ 38 ವರ್ಷ ವಯಸ್ಸಿನ ರಘು ಶಂಕರ್ ಎಂದು ಗುರುತಿಸಲಾಗಿದ್ದು, ಆರೋಪಿಯು ಹಂಪಿ ಎಕ್ಸ್‌ಪ್ರೆಸ್ ರೈಲಿನಲ್ಲಿ ತಲಾ 01 ಕೆ.ಜಿ. ತೂಕದ 06 ಪಾಕೆಟ್ ಅಂದರೆ ಒಟ್ಟು 06 ಕೆ.ಜಿ. ಯಷ್ಟು ಗಾಂಜಾ ಸಾಗಿಸುತ್ತಿದ್ದುದನ್ನು ಬಳ್ಳಾರಿ ರೈಲ್ವೆ ಪೊಲೀಸರು ಪತ್ತೆಹಚ್ಚಿದ್ದಾರೆ. 06 ಕೆ.ಜಿ. ಗಾಂಜಾದ ಮೌಲ್ಯ 06 ಲಕ್ಷ ರೂ. ಗಳೆಂದು ಅಂದಾಜಿಸಲಾಗಿದೆ. ಆರೋಪಿಯನ್ನು ಬಂಧಿಸಿ, ನಿಯಮಾನುಸಾರ ಪ್ರಕರಣ ದಾಖಲಿಸಿಕೊಳ್ಳಲಾಗಿದೆ.

ಪ್ರಕರಣ ಕುರಿತು ನೈರುತ್ಯ ರೈಲ್ವೆ ಹುಬ್ಬಳ್ಳಿ ವಿಭಾಗದ ಡಿವಿಜನಲ್ ಸೆಕ್ಯುರಿಟಿ ಕಮಿಷನರ್, ಹುಬ್ಬಳ್ಳಿಯ ನೈರುತ್ಯ ರೈಲ್ವೆ ವಿಭಾಗದ ಚುನಾವಣಾ ಶಾಖೆಗೆ ವರದಿ ಸಲ್ಲಿಸಿದ್ದಾರೆ.




# ಮತದಾನ ಜಾಗೃತಿಗೆ ಬೈಕ್ ಏರಿದ ಡಿಸಿ, ಸಿಇಓ

**ಮೊದಲ ಪುಟದಿಂದ:**

ಜಿಪಂ ಸಿಇಓ ಸದಾಶಿವ ಪ್ರಭು ಬಿ ಮಾತನಾಡಿ, ಜಿಲ್ಲಾಡಳಿತದ ಸಹಯೋಗದಲ್ಲಿ ಜಿಲ್ಲಾ ಪಂಚಾಯತ್ ಮತ್ತು ಜಿಲ್ಲಾ ಸ್ವೀಪ್ ಸಮಿತಿಯಿಂದ ಜಿಲ್ಲಾದ್ಯಂತ ಸಾಕಷ್ಟು ಸ್ವೀಪ್ ಕಾರ್ಯಕ್ರಮಗಳನ್ನು ರೂಪಿಸಿ ಲೋಕಸಭಾ ಚುನಾವಣೆ ಹಿನ್ನೆಲೆಯಲ್ಲಿ ಸಾರ್ವಜನಿಕರಿಗೆ ಮತದಾನದ ಜಾಗೃತಿ ಮೂಡಿಸಲಾಗಿದೆ ಎಂದು ತಿಳಿಸಿದರು.

ವಿವಿಧೆಡೆ ಸಂಚಾರ: ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಸ್ವತಃ ತಾವೆ ಬೈಕ್ ಚಲಾಯಿಸಿ ಇತರರಿಗೆ ಸ್ಫೂರ್ತಿ ತುಂಬಿದರು. ಬೈಕ್ ರಾಲಿಯು ಜಿಲ್ಲಾಡಳಿತ ಭವನದಿಂದ ಆರಂಭಗೊಂಡು ನಗರದ ಪ್ರಮುಖ ರಸ್ತೆಗಳಲ್ಲಿ ಸಂಚರಿಸಿ ಸಿಟಿ ಮುನ್ಸಿಪಲ್ ಆಫೀಸ್ ಆವರಣಕ್ಕೆ ಬಂದು ಮುಕ್ತಾಯವಾಯಿತು.

ಬೈಕ್ ರ್‍ಯಾಲಿ ವೇಳೆ ಸಮಾಜ ಕಲ್ಯಾಣ ಇಲಾಖೆಯ ಜಂಟಿ ನಿರ್ದೇಶಕರಾದ ಮಂಜುನಾಥ ಹೆಚ್.ಎಸ್., ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಉಪ ನಿರ್ದೇಶರಾದ ರಾಮಚಂದ್ರಪ್ಪ, ರೇಷ್ಮೆ ಇಲಾಖೆಯ ಉಪ ನಿರ್ದೇಶಕರಾದ ಸುಧೀರ್, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ಉಪ ನಿರ್ದೇಶಕರಾದ ಯುವರಾಜ ನಾಯಕ, ಆಹಾರ ಇಲಾಖೆಯ ಉಪ ನಿರ್ದೇಶಕರಾದ ಮಲ್ಲಿಕಾರ್ಜುನ, ಹೊಸಪೇಟೆ ತಾಲೂಕು ಪಂಚಾಯತ್ ಕಾರ್ಯನಿರ್ವಹಣಾಧಿಕಾರಿ ಹರೀಶ್, ಜಿಲ್ಲಾ ವಾರ್ತಾಧಿಕಾರಿ ಗವಿಸಿದ್ದಪ್ಪ, ನಿರ್ಮಿತಿ ಕೇಂದ್ರ ಯೋಜನಾ ನಿರ್ದೇಶಕರಾದ ರವಿಕುಮಾರ, ಶಿಶು ಅಭಿವೃದ್ಧಿ ಯೋಜನಾಧಿಕಾರಿ ಸಿಂದು ಯಲಿಗಾರ ಸೇರಿದಂತೆ ಇತರರು ಇದ್ದರು.



ಪ್ರತಿಜ್ಞಾವಿಧಿ ಬೋಧನೆ: ಬೈಕ್ ರ್‍ಯಾಲಿಯ ಆರಂಭಕ್ಕು ಮೊದಲು ಮತದಾನ ಜಾಗೃತಿಯ ಪ್ರತಿಜ್ಞಾವಿಧಿ ಬೋಧಿಸಲಾಯಿತು. ಜಿಲ್ಲಾ ಪಂಚಾಯತ್ ಮುಖ್ಯ ಯೋಜನಾಧಿಕಾರಿ ಅನ್ನದಾನೇಶ್ವರ ಸ್ವಾಮಿ ಜೆ.ಎಂ.ಅವರು ಪ್ರತಿಜ್ಞಾವಿಧಿ ಬೋಧಿಸಿದರು.

ಗಮನ ಸೆಳೆದ ಫಲಕಗಳು: ಮತದಾನಕ್ಕಿಂತ ಇನ್ನೊಂದಿಲ್ಲ ನಾನು ಖಚಿತವಾಗಿ ಮತದಾನ ಮಾಡುವೆ., ನಿಮ್ಮ ಮತ ನಿಮ್ಮ ಹಕ್ಕು, ಕಡ್ಡಾಯವಾಗಿ ಮಾತದಾನ ಮಾಡಿ ಎನ್ನುವ ನಾನಾ ಘೋಷಣೆಗಳ ಫಲಕಗಳನ್ನು ಬೈಕ್‌ಗೆ ಕಟ್ಟಿ ಸಾಗಿದ್ದು ವಿಶೇಷವಾಗಿತ್ತು.

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA